# 19ನೇ ಶತಮಾನದ ಕೊನೆಯ ಭಾಗದಲ್ಲಿ ಭಾರತದಲ್ಲಿ ಕಂಡುಬಂದ ಸಾಂಸ್ಕೃತಿಕ ಮುಂಬೆಳಗು

**ಡಾ. ಹೆಚ್. ಪಾಂಡುರಂಗ ವಿಠಲ**

ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ೧೯ನೇ ಶತಮಾನದ ಕೊನೆಯ ಭಾಗ ಅತ್ಯಂತ ಮಹತ್ವದ್ದಾಗಿದೆ. ಒಂದೆಡೆ ಅನೇಕ ಮಂದಿ ಸಾಧು, ಸಂತರುಗಳು ವಿವಿಧ ಪ್ರಾಂತ್ಯಗಳಲ್ಲಿ ಜನ್ಮವೆತ್ತಿದ ಕಾಲ; ಅವರು ವಿಶೇಷವಾಗಿ ಆಧ್ಯಾತ್ಮಿಕ ಜಾಗೃತಿಯನ್ನೂ ನಮ್ಮ ಸಾಂಸ್ಕೃತಿಕ ಪ್ರಜ್ಞೆಯನ್ನೂ ಮೂಡಿಸಿದರು. ಇನ್ನೊಂದೆಡೆ ಸಾಮಾಜಿಕ, ರಾಜಕೀಯ ರಂಗಗಳಲ್ಲಿ ಆಂದೋಲನ ಆರಂಭವಾದ ಯುಗವಿದು. ಈ ಕುರಿತು ಬರೆದಿರುವ ಲೇಖಕರು ಮೈಸೂರಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದಾರೆ. ಒಳ್ಳೆಯ ಚಿಂತಕರೂ, ಬರಹಗಾರರೂ ಆಗಿರುವ ಇವರ ಅನೇಕ ಬರಹಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

**ಸಂ**ಸ್ಕೃತಿ ಶಬ್ದವು ಸಮ್ಯಕ್+ಕೃತಿ ಎಂಬ ಶಬ್ದಗಳ ಸಂಯೋಜನೆಯಿಂದ ಆದ ಪದ. ಸುಂದರವಾದ ವಸ್ತು ಅಥವಾ ಕೆಲಸ ಎಂದು ಅರ್ಥ. ಉಪಯುಕ್ತವೂ, ಸಮರ್ಪಕವೂ ಆದ ವಸ್ತು ನಿರ್ಮಾಣವೇ ಸಂಸ್ಕೃತಿ. ಚಿಂತನೆ ಹಾಗೂ ವಿವೇಕಗಳು ಇಲ್ಲಿ ಒಂದಾಗಿ ಕೆಲಸ ಮಾಡುತ್ತವೆ. ಸಾಹಿತ್ಯ, ಕಲೆ, ಉತ್ಸವಗಳೆಲ್ಲದರ ಹಿಂದೆ ಇರುವುದು ಸಂಸ್ಕೃತಿಯೇ. ಪ್ರಕೃತಿಯಿಂದ ಪಡೆದ ಆನಂದಾನುಭವ ಸಾಧಾರಣ ಜೀವನವನ್ನು ಪಾವನಗೊಳಿಸುತ್ತದೆ. ಶಿಲೆಯಲ್ಲಿ ಮನೋಹರವಾದ ಮೂರ್ತಿಯ ಇರುವಿಕೆಯನ್ನು ಗುರುತಿಸಿ, ಕಡೆದು, ಎಲ್ಲರೂ ಪೂಜಿಸುವಂತೆ ಮಾಡುವುದು ಸಂಸ್ಕೃತಿ. ಪ್ರಕೃತಿಗೆ ಸಂಸ್ಕಾರ ನೀಡುವುದು ಸಂಸ್ಕೃತಿ. ಪ್ರಾಣಿಗಳು ಶಬ್ದಗಳಿಂದ ಸಂವಹಿಸಿದರೆ, ಮಾನವ ಶಬ್ದಕ್ಕೆ ಭಾಷೆಯ ಅಲಂಕಾರ ತೊಡಿಸಿ, ಭಾವನೆಗಳನ್ನು ಸೂಕ್ಷ್ಮಗೊಳಿಸಿಕೊಂಡಿರುವುದು ಸಂಸ್ಕೃತಿ. ಪ್ರಕೃತಿಯ ದನಿಗಳಿಗೆ ಸ್ವರಗಳನ್ನೂ, ರಾಗಗಳನ್ನೂ ಜೋಡಿಸಿ, ಸಂಗೀತವನ್ನು ಸೃಷ್ಟಿಸುವುದು, ನಡಿಗೆಯನ್ನು ನೃತ್ಯಕ್ಕೆ ಅಳವಡಿಸುವುದು ಸಂಸ್ಕೃತಿ. ಗಂಡು-ಹೆಣ್ಣಿನ ನಡುವೆ ಪ್ರಾಣಿಗಳಂತೆ ಕೇವಲ ಕಾಮ ಮಾತ್ರ ಇರದೆ ತಾಯಿ, ತಂಗಿ ಮೊದಲಾದ ಸಂಬಂಧ ಕಲ್ಪನೆ ಸಂಸ್ಕೃತಿ. ಪ್ರಯೋಜನ ದೃಷ್ಟಿ, ತರ್ಕ ಇಲ್ಲದೆ ಗೋವನ್ನು ಗೋಮಾತೆ ಎಂದು ಪೂಜಿಸುವುದು ಸಂಸ್ಕೃತಿ.

ಸಂಸ್ಕೃತಿಯನ್ನು ಮಾನವನ ಪ್ರಗತಿ ಸೂಚಕವಾದ ನಾಗರಿಕತೆಗೆ ಹೋಲಿಸಲಾಗದು. ನಾಗರಿಕತೆಯು ಭೌತಿಕ ಪ್ರಗತಿ; ನಗರ ಜೀವನಕ್ಕೆ ಸಂಬಂಧಿಸಿದ್ದು. ಮಾನವನ ಜೀವನಕ್ಕೆ ಸುಖ ಸೌಕರ್ಯಗಳನ್ನು ನೀಡುವ, ಒಟ್ಟಿಗೆ ವ್ಯವಸ್ಥಿತವಾಗಿ ಜೀವಿಸಲು ಶಾಸನಗಳನ್ನು ಮಾಡುವ, ಹೊಸದರ ಬಗ್ಗೆ ತುಡಿಯುವ ವಸ್ತುಸ್ಥಿತಿ. ಇನ್ನೊಂದು ಬಹು ಸರಳವಾದ ವ್ಯಾಖ್ಯೆಯೂ ಸಂಸ್ಕೃತಿಗೆ ಇದೆ. ನಾವು ಏನನ್ನು ಹೊಂದಿರುವೆವೋ ಅದು ನಾಗರಿಕತೆ; ಏನು ಆಗಿರುವೆವೋ ಅದು ಸಂಸ್ಕೃತಿ. ಒಂದು ಬಹಿರಂಗದ್ದು, ಲೌಕಿಕ ಸಂಪತ್ತು; ಇನ್ನೊಂದು ಅಂತರಂಗದ್ದು, ಆತ್ಮಸಂಪತ್ತು. ಆದರೂ ಎರಡೂ ಜೊತೆಯಾಗಿದ್ದು, ಒಂದು ಇನ್ನೊಂದನ್ನು ಅವಲಂಬಿಸುತ್ತದೆ, ಪರಿಣಾಮ ಬೀರುತ್ತದೆ. ನಾಗರಿಕತೆಗೆ ಸಂಸ್ಕೃತಿಯ ಮಾರ್ಗದರ್ಶನ ವಿಶ್ವಶಾಂತಿಗೆ ಅಗತ್ಯ.

ಸಂಪ್ರದಾಯ, ಆಚರಣೆಗಳು, ಸೌಹಾರ್ದ ಹಾಗೂ ನೆಮ್ಮದಿಯನ್ನು ತರುವ ರೀತಿನೀತಿಗಳು, ಆಧ್ಯಾತ್ಮಿಕ ಭಾವ ಇವುಗಳನ್ನು ಹೊಂದಿದ ಶಾಂತ ಜೀವನಕ್ರಮ ಸಂಸ್ಕೃತಿ. ಸಮಾಜದ ಸದಸ್ಯನಾಗಿ ಮಾನವ ಹೊಂದಿರುವ ಜ್ಞಾನ, ನಂಬಿಕೆ, ಕಲೆ, ನೈತಿಕ ನಿಯಮ ಮೊದಲಾದವುಗಳು ಇದರ ಭಾಗ; ಮೌಲ್ಯಗಳು ಇದರ ಹೃದಯ. ಸಂಸ್ಕೃತಿಯ ಸಾಧನಗಳನ್ನು ಅಳವಡಿಸಿಕೊಳ್ಳಲು ಸಹೃದಯತೆ ಬೇಕು. ಒಂದು ಸಂಸ್ಕೃತಿ ಇನ್ನೊಂದರ ಬಗ್ಗೆ ತಿರಸ್ಕಾರವನ್ನು ಹೊಂದಿದಾಗ, ಘರ್ಷಣೆಗೆ ಅವಕಾಶ. ಆಯಾ ಜನಾಂಗದ ಅಸಾಧಾರಣ ಗುಣಲಕ್ಷಣಗಳ ಅಭಿವ್ಯಕ್ತಿ ಸಂಸ್ಕೃತಿಯಾದುದರಿಂದ, ಸಮಾನ ಅಭಿರುಚಿ, ಸಮಾನ ಮನೋಧರ್ಮವಿದ್ದಾಗ ಮಾತ್ರ ಒಂದು ಸಂಸ್ಕೃತಿ ಇನ್ನೊಂದನ್ನು ಪ್ರಭಾವಗೊಳಿಸುವುದು ಸಾಧ್ಯ.

ಮೌಲ್ಯಗಳಿಗೂ ಸಂಸ್ಕೃತಿಗೂ ಇರುವ ಸಂಬಂಧದಿಂದ, ಮೌಲ್ಯಗಳ ಸಾರವಾದ ಧರ್ಮವು ಸಂಸ್ಕೃತಿಯ ಆತ್ಮ ಎನ್ನಬಹುದು. ಇವೆರಡನ್ನೂ ಬೇರ್ಪಡಿಸುವುದು ಕಷ್ಟ. ಸಂಸ್ಕೃತಿಯು ಧರ್ಮವನ್ನು, ಸಮಾಜವನ್ನು ಪೋಷಿಸುತ್ತದೆ; ಹೀಗಾಗಿಯೆ ವಿಭಿನ್ನ ಸಂಸ್ಕೃತಿಗಳನ್ನುಳ್ಳ ಭಾರತದಲ್ಲಿ ತತ್ತ್ವ, ಮೌಲ್ಯಗಳು, ಉದಾತ್ತವಾಗಿ, ಅಖಂಡವಾಗಿ ಇವೆ. ಸಾಮಾನ್ಯವಾಗಿ ಸಾಂಸ್ಕೃತಿಕ ಆಚರಣೆಗಳು ಭಗವಂತನ ಆರಾಧನೆಗೆ ಬಳಸಲ್ಪಡುತ್ತವೆ. ಎಲ್ಲರಲ್ಲಿಯೂ ಮಾನವತೆಯನ್ನು ಕಾಣುವ ಐಕ್ಯ ವಿಶ್ವಧರ್ಮ ಹಿಂದೂಧರ್ಮವಾಗಿದ್ದು, ನಮ್ಮೆಲ್ಲರನ್ನೂ ಒಂದಾಗಿ ಬೆಸೆದಿದೆ. ದೇವರು, ಪುನರ್ಜನ್ಮ, ಕರ್ಮಸಿದ್ಧಾಂತಗಳಲ್ಲಿ ನಂಬಿಕೆ, ಪ್ರಕೃತಿ ಆರಾಧನೆ, ಹುಟ್ಟು-ಸಾವುಗಳ ಬಂಧನದಿಂದ ಮೋಕ್ಷಕ್ಕಾಗಿ ಪ್ರಯತ್ನ, ಪರೋಪಕಾರ ಪರಮ ಎಂಬ ಭಾವನೆ ಇವು ಹಿಂದೂಧರ್ಮ ಹಾಗೂ ಸಂಸ್ಕೃತಿಯ ಲಕ್ಷಣಗಳಾಗಿವೆ. ಪ್ರಾಮಾಣಿಕತೆ ಹಾಗೂ ನೀತಿ, ಆದರ್ಶಪೂರ್ಣ ಜೀವನಕ್ರಮ ಸಾರ್ವತ್ರಿಕವಾಗಿದ್ದ ನಮ್ಮ ಸಮಾಜದ ಸಂಸ್ಕೃತಿಯ ನಾಶಕ್ಕೆ ಆಕ್ರಮಣಕಾರರು ಬಹಳಷ್ಟು ಹಾನಿ ಮಾಡಿದ್ದಾರೆ. ಸಂಸ್ಕೃತಿ ನಾಶಕ್ಕೆ ಸ್ವಾರ್ಥವೇ ಪರಮವಾದ ಸೆಕ್ಯುಲರ್ ಶಿಕ್ಷಣ ಪದ್ಧತಿಯನ್ನು ಆಚರಣೆಗೆ ತಂದರೆ ಮಾತ್ರ ತಮ್ಮ ಆಡಳಿತಕ್ಕೆ ಉಳಿಗಾಲ

ಎಂದು ಮೆಕಾಲೆಯು ಹೇಳಿದ್ದು ಸತ್ಯವಾಗಿರುವುದನ್ನು ಕಾಣಬಹುದು. ಹಿಂದೂ ಸಂಸ್ಕೃತಿ ಇಂದು ವಿಕೃತವಾಗುತ್ತಿದ್ದು, ಸಮಾಜ ಅನೈತಿಕತೆಯತ್ತ ಜಾರುತ್ತಿದೆ. ಸಂಸ್ಕೃತಿಯು ವಿಕೃತಿಯಾದ ದೇಶಗಳಲ್ಲಿ ಅಸಭ್ಯತೆ ಕ್ರೌರ್ಯಗಳು ಮೆರೆಯುತ್ತವೆ. ನಮ್ಮ ಧರ್ಮ, ಸಂಸ್ಕೃತಿಗಳನ್ನು ನಮ್ಮವರೇ ಹೀಗಳೆದು, ಮಾಧ್ಯಮಗಳು ಅದಕ್ಕೆ ಪ್ರಚಾರ ನೀಡುತ್ತಿರುವುದನ್ನು ಎಲ್ಲೆಡೆ ಕಾಣಬಹುದು. ವಿದೇಶೀ ಆಳ್ವಿಕೆ ಕೊನೆಗೊಂಡು ದಶಕಗಳೇ ಉರುಳಿದರೂ ಭೋಗಪ್ರಧಾನವಾದ, ಅಸುರ ಸಂಸ್ಕೃತಿಯೆ ಮೇಲು ಎನ್ನುವ ದಾಸ್ಯ ಮನೋಭಾವ ಹೋಗುತ್ತಿಲ್ಲ. ಇದಕ್ಕೆ ಕಾರಣ ಹೆಚ್ಚಿನ ಜನರಿಗೆ ನಮ್ಮ ಧರ್ಮದ ಬಗ್ಗೆ ತಿಳಿವಳಿಕೆಯೇ ಇಲ್ಲದಂತೆ ಮಾಡುವ ನಮ್ಮ ವ್ಯವಸ್ಥೆ.

ನಮ್ಮ ದೇಶದಲ್ಲಿನ ಬೇರೆ ಧರ್ಮಗಳವರನ್ನು ಬಿಡಿ, ಹಿಂದೂಗಳಲ್ಲಿಯೆ ಎಷ್ಟು ಮಂದಿ ಧ್ಯಾನ, ಯೋಗಗಳನ್ನು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಭಾಗ ಎಂದು ತಿಳಿದುಕೊಂಡಿದ್ದಾರೆ? ಶ್ರಮ ಸಂಸ್ಕೃತಿ, ದೇಹ ಮತ್ತು ಮನಸ್ಸಿನ ಮೇಲೆ ಅದರ ಪ್ರಭಾವ ಇವುಗಳನ್ನು ನಮ್ಮ ಪೂರ್ವಿಕರು ತಿಳಿದಿದ್ದರು. ಎಲ್ಲವೂ, ಎಲ್ಲರಿಗೂ ಸಮಾನ ಎಂಬ ಪ್ರಜಾಪ್ರಭುತ್ವದ ಮನೋಭಾವ ಅವರಲ್ಲಿತ್ತು. ಸಾಂಸ್ಕೃತಿಕ ಸಂಪನ್ಮೂಲಗಳಾದ ಭಾಷೆ, ಧರ್ಮ, ದೇವರು, ಪುರಾಣ, ಸಾಹಿತ್ಯ, ಸಿನಿಮಾ ಮೊದಲಾದವುಗಳನ್ನು ಅಸಮಾನತೆಗಳನ್ನು ಹೆಚ್ಚಿಸುವ, ಆದರೆ ಅದು ಗೊತ್ತಾಗದ ರೀತಿಯಲ್ಲೂ ಬಳಸಬಹುದು. ಅರ್ಥ, ರಾಜಕೀಯಗಳಿಂದ ಸಂಸ್ಕೃತಿಯನ್ನು ಪ್ರತ್ಯೇಕಿಸಿ ನೋಡುವುದರಿಂದ, ಇವನ್ನು ಮೇಲ್ವರ್ಗದವರ ಆಸಕ್ತಿಗೆ ಪೂರಕವಾಗುವಂತೆ ಮಾಡಿರುವುದನ್ನು ಕಾಣಬಹುದು. ಸಾಂಸ್ಕೃತಿಕ ಸಂಪನ್ಮೂಲಗಳು ಮಾಧ್ಯಮ ಕೂಡ ಆಗಿವೆ. ಸಮಾಜದ ಎಲ್ಲರ ಹಿತವನ್ನು, ಗೌರವವನ್ನು ಕಾಪಾಡಿ, ಎಲ್ಲರೂ ತಮ್ಮ ಅಸ್ಮಿತೆಯನ್ನು ಕಂಡುಕೊಂಡು ಬಲಗೊಳ್ಳುವಂತೆ ಇವನ್ನು ಬಳಸುವುದು ಉತ್ತಮ ರಾಜಕಾರಣದಿಂದ ಸಾಧ್ಯ. ಏಕೆಂದರೆ, ಜನರು ಯಾವ ಶಿಕ್ಷಣ ಪಡೆಯಬೇಕು, ಏನು ಕೇಳಿ–ನೋಡಬೇಕು ಎಂಬುದನ್ನು ನಿರ್ಧರಿಸುವುದು ವ್ಯವಸ್ಥೆ. ಸ್ವಾತಂತ್ರ್ಯಪೂರ್ವದಲ್ಲಿ ಆಡಳಿತವ್ಯವಸ್ಥೆಯು ನಮ್ಮ ಸಮಾಜವನ್ನು ಸಾಂಸ್ಕೃತಿಕ ನಿಕೃಷ್ಟೀಕರಣಕ್ಕೆ ನೂಕಿ, ನಮ್ಮ ಸಾಮರ್ಥ್ಯಗಳನ್ನು ಬಳಸಿಕೊಳ್ಳಲು ಅಡ್ಡಿಯಾಗಿದ್ದುದನ್ನು ಅರಿತು ಜಾಗ್ರತರಾದ ಸಂದರ್ಭದಲ್ಲಿ, ಈ ಜಾಗೃತಿ ಹೇಗೆ ನಮ್ಮ ಜನರ ಸ್ವಾತಂತ್ರ್ಯಾಪೇಕ್ಷೆಯನ್ನು ಹೆಚ್ಚುಮಾಡಿತು ಎಂಬ ಇತಿಹಾಸವನ್ನು ಈಗ ನೋಡೋಣ.

ವಿವರಣೆಗಳಿಗಿಂತ ಇತಿಹಾಸ ಯಾವಾಗಲೂ ಸ್ವಲ್ಪವೇ ಇರುತ್ತದೆ. ಆಗಿದ್ದುದಕ್ಕೆ ನಾವು ಏನು ಮಾಡಿದೆವು ಎಂಬುದು ಮುಂದಿನ ಇತಿಹಾಸವನ್ನು ಸೃಷ್ಟಿಸುತ್ತದೆ. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಅಥವಾ ನಾವು ಇತ್ತೀಚಿನವರೆಗೂ ಓದುತ್ತಿದ್ದ ಸಿಪಾಯಿ ದಂಗೆ ಒಂದು ಐತಿಹಾಸಿಕ ಘಟ್ಟ. ಇದು ೧೯ನೆ ಶತಮಾನದ ಉಳಿದ ಭಾಗ, ಸ್ವಾತಂತ್ರ್ಯಾನಂತರದ ಈವರೆಗೂ ದಿಶಾ ಪರಿವರ್ತನೆಯನ್ನು ಉಂಟುಮಾಡಿತು. ಸೈನಿಕರ ಈ ಹೋರಾಟಕ್ಕೆ ಸ್ಫೂರ್ತಿ ೧೭೭೦ರಿಂದ ನಾಲ್ಕು ದಶಕಗಳ ಕಾಲ ನಡೆದ ಸನ್ಯಾಸಿ ಆಂದೋಲನ ಎಂಬುದು ಧರ್ಮವೇ ಭಾರತೀಯರನ್ನು ಒಗ್ಗೂಡಿಸುವ ಶಕ್ತಿ ಎಂಬ ಅಭಿಪ್ರಾಯಕ್ಕೆ ಅನುಗುಣವಾಗಿಯೆ ಇದೆ. ವಾರನ್ ಹೇಸ್ಟಿಂಗ್ಸ್ ಮತ್ತು ಅವನ ಪಡೆಯನ್ನು ಕಂಗೆಡಿಸಿದ ಈ ಆಂದೋಲನದ ಮೂಲವೂ ಜನಸಾಮಾನ್ಯರು, ಬಡರೈತರ ಮೇಲೆ ವಿಧಿಸಿದ್ದ ಮಿತಿಮೀರಿದ ಭೂ ಕಂದಾಯ. ತಮ್ಮ ಸಂಗ್ರಹ, ಖಜಾನೆಗಳನ್ನು ಲೂಟಿಮಾಡಿದ ಸಂಪತ್ತು ಎಲ್ಲವನ್ನೂ ಸನ್ಯಾಸಿಗಳು ಹೊಸಬರ ತರಬೇತಿಗೆ ಬಳಸಿ, ಹೆಚ್ಚಿನದನ್ನು ಪೀಡಿತ ಬಡಜನರಿಗೆ ಹಂಚುತ್ತಿದ್ದರು. ಯೋಗಿಗಳು ಸಮಾಜದ ಹಿತಕ್ಕಾಗಿ ಹಲವು ಬಾರಿ ಶಸ್ತ್ರ ಹಿಡಿದು ರಕ್ಷಣೆ ಕೊಡಲು ಜನರೊಡನೆ ಸೇರಿದ್ದು ನಮ್ಮ ಚರಿತ್ರೆಯಲ್ಲಿ ದಾಖಲಾಗಿದೆ.

ಬ್ರಿಟಿಷರ ದಬ್ಬಾಳಿಕೆಯ ಪರಿಣಾಮವಾದ ಭಾರತೀಯರ ಶಕ್ತಿಹೀನತೆ ಎಲ್ಲರ ಅನುಭವದಲ್ಲಿದ್ದರೂ, ಅದಕ್ಕೆ ಶಕ್ತ ಪ್ರತಿಕ್ರಿಯೆ ಸಿಪಾಯಿಗಳಿಂದ ತೀಕ್ಷ್ಣವಾಗಿ ಹೊರಹೊಮ್ಮಿದ್ದು ಹೊಸ ಆಶಾವಾದಕ್ಕೆ ಎಡೆ ನೀಡಿತು.

ಆದರೂ ಜೀವನವನ್ನು ಸುಖಮಯಗೊಳಿಸುವುದಾದರೆ ಬ್ರಿಟಿಷರ ಅಥವಾ ಪಾಶ್ಚಾತ್ಯರ ಶಿಕ್ಷಣ ತಂತ್ರಜ್ಞಾನಗಳು ಏಕೆ ಬೇಡ ಎಂದು ಸಾರಾಸಗಟಾಗಿ ಅವನ್ನು ಒಪ್ಪಿಕೊಳ್ಳುವ ಮೇಲುವರ್ಗದವರ ಧೋರಣೆ, ಆಧುನಿಕತೆಯ ಸ್ವರೂಪ ಮತ್ತು ಪರಿಣಾಮಗಳ ಬಗ್ಗೆ ವಿಚಾರ ಮಾಡುವುದನ್ನೆ ಬಿಟ್ಟುಕೊಟ್ಟ ಇತರರ ತಾಟಸ್ಥ್ಯ ಮುಂದುವರಿದಿತ್ತು. ಎಲ್ಲೋ ಕೆಲವರು ಇಷ್ಟು ಜ್ಞಾನ, ಸಂಪತ್ತುಳ್ಳ ಭಾರತ ಚಿಕ್ಕ ದೇಶಕ್ಕೆ ವಶವಾದದ್ದು ಹೇಗೆ ಎಂದು ಯೋಚಿಸುತ್ತಿದ್ದರು. ಆದರೂ, ಜನಸಾಮಾನ್ಯರ ಮಾನಸಿಕ ದಾಸ್ಯ ಕೊನೆಗೊಳಿಸಿ, ಅವರನ್ನೂ ಒಳಗೊಳ್ಳದ ಹೊರತು, ಸ್ವಾತಂತ್ರ್ಯಕ್ಕಾಗಿ ಅವರು ಎಚ್ಚರಗೊಳ್ಳದ ಹೊರತು ಬದಲಾವಣೆ ಅಸಾಧ್ಯವಾಗಿತ್ತು. ದೇಶದ ಪುನಶ್ಚೇತನಕ್ಕೆ, ಜನಜಾಗರಣಕ್ಕೆ ಸಮಾಜದ ನೇತಾರರು, ಆಧ್ಯಾತ್ಮಿಕ ಮಹಾಪುರುಷರು ಕೈಜೋಡಿಸಿದ್ದರಿಂದಲೇ ಹತ್ತೊಂಬತ್ತನೆಯ ಶತಮಾನದ ಸಾಂಸ್ಕೃತಿಕ, ರಾಜಕೀಯ ನವೋದಯ ಸಾಧ್ಯವಾಯಿತು. ಆಂಗ್ಲರ ದಮನ ಶಾಹಿಯ ಪ್ರವಾಹಕ್ಕೆ ಎದುರಾಗಿ ಈಜಬೇಕಾದ ಸನ್ನಿವೇಶದಲ್ಲಿ , ಕೇವಲ ಕೆಲವರು ಮಾತ್ರ ಹೋರಾಟಕ್ಕೆ ಇಳಿದುದು ಸಹಜವೇ ಆಗಿತ್ತು.

ಆದರೆ ಇಂತಹ ಪುನುರುಜ್ಜೀವನ ಸ್ವತಂತ್ರ ರಾಷ್ಟ್ರಗಳಿಗೆ ಮಾತ್ರ ಸಾಧ್ಯ, ವಸಾಹತೊಂದು ಹೊಸ ಸೃಷ್ಟಿಯ ನವೋದಯವನ್ನು ಹೊಂದುವುದೇ ಅಸಾಧ್ಯ, ಇವೆಲ್ಲ ಬರೀ ಸುಧಾರಣೆಗಳು ಮಾತ್ರ ಎನ್ನುವವರೂ ಇದ್ದಾರೆ. ಇವರು ಭಾರತೀಯ ಸಂಸ್ಕೃತಿ ವಿಭಜನೆಯ ಹಂತದಲ್ಲಿದ್ದು, ಈ ಪುನರುಜ್ಜೀವನ ಎಂಬುದು ಮಧ್ಯಮವರ್ಗದ ಬುದ್ಧಿಜೀವಿಗಳಿಗೆ ಮಾತ್ರ ಸೀಮಿತವಾಗಿದ್ದು, ಜನಸಾಮಾನ್ಯರನ್ನು ಮುಟ್ಟಲಿಲ್ಲ ಎಂದು ಹೇಳುತ್ತಾರೆ. ಸ್ವಾತಂತ್ರ್ಯಾನಂತರ ಪಟ್ಟಭದ್ರರೇ ಆಡಳಿತ ಸೂತ್ರ ಹಿಡಿದುದು, ಆಂಗ್ಲರಂತೆಯೇ ಸಮಾಜವನ್ನು ವಿಭಜಿಸುತ್ತಾ, ಸುಧಾರಣೆಗಳ ಭರವಸೆಗಳನ್ನು ನೀಡುತ್ತಾ ಕೆಳಹಂತದವರನ್ನು ಬಾಯಿಲ್ಲದವರನ್ನಾಗಿ

ಮಾಡಿ, ಶೋಷಣೆಯನ್ನು ಮುಂದುವರಿಸುತ್ತ ಹೋದುದನ್ನು ನೋಡಿದರೆ, ಈ ವಾದದಲ್ಲೂ ಸ್ವಲ್ಪ ಹುರುಳಿದೆಯೇನೋ ಎನ್ನಿಸುತ್ತದೆ.

ಹತ್ತೊಂಬತ್ತನೆಯ ಶತಮಾನದ ಹೊತ್ತಿಗೆ ಜನಸಾಮಾನ್ಯರಲ್ಲೂ ಹೊಸ ಎಚ್ಚರ ಮೂಡಿತ್ತು. ರಾಜಕೀಯ ಸ್ವಾತಂತ್ರ್ಯದಿಂದ ದಾಸ್ಯ ಕೊನೆಯಾಗದು, ಸಂಸ್ಕೃತಿ, ಆಧ್ಯಾತ್ಮಿಕ, ಸಾಮಾಜಿಕ ಮೊದಲಾಗಿ ಎಲ್ಲ ಜೀವನಕ್ಷೇತ್ರಗಳಲ್ಲೂ ಬದಲಾವಣೆಯಾಗಬೇಕು; ನಮ್ಮ ಪರಂಪರೆಯನ್ನು ಹಿನ್ನೆಲೆಯಾಗಿಸಿ ಅದರ ಮುಂದುವರಿಕೆಯಾಗಿ ಸ್ವಾಭಿಮಾನ ಮೂಡಬೇಕು; ಹೋರಾಟ ವಿವಿಧ ಮುಖಗಳಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಇರಬೇಕು ಎಂಬ ಎಚ್ಚರ ಅದು. ಸ್ವಾಮಿ ವಿವೇಕಾನಂದ, ಭಗಿನಿ ನಿವೇದಿತಾ ಮೊದಲಾದವರು ಎಲ್ಲ ಕ್ಷೇತ್ರಗಳನ್ನೂ ಒಳಗೊಂಡಂತೆ ಈ ಸ್ವದೇಶಿ ಜಾಗೃತಿಯನ್ನು ಮೂಡಿಸುವ ಕೆಲಸ ಮಾಡಿದರೆ, ಒಂದೊಂದೇ ಕ್ಷೇತ್ರವನ್ನು ಆಯ್ದು, ಅದರಲ್ಲೇ ತೊಡಗಿಸಿಕೊಂಡವರು ಹಲವರು.

೧೯ನೆಯ ಶತಮಾನವು ಭಾರತದ ಪುನರುಜ್ಜೀವನ ಕಾಲ ಎಂದು ಪರಿಗಣಿತವಾಗಿದೆ. ಭಾರತದ ನವಯುಗ ಪ್ರವರ್ತಕರೆಂದು ಹೆಸರಾದ ರಾಜಾ ರಾಮಮೋಹನ ರಾಯ್ ತಮ್ಮ ಅತ್ತಿಗೆಯ ಸಹಗಮನದಿಂದ ನೊಂದು, ಸಮಾಜ ಸುಧಾರಣೆಗೆ ಪ್ರಯತ್ನಿಸಿದರು. ಅವರು ದ್ವಾರಕನಾಥ್ ಠಾಕೂರ್, ತಾರಾಚಂದ್ರ ಚಕ್ರವರ್ತಿ, ಕಾಳಾನಾಥ್ ಮುನ್ಷಿ ಮುಂತಾದವರ ಸಹಕಾರದಿಂದ ೧೮೨೮ರಲ್ಲಿ ಬ್ರಹ್ಮಸಮಾಜವನ್ನು ಸ್ಥಾಪಿಸಿದರು. ಇವರ ಮನವಿಯಂತೆ ವಿಲಿಯಂ ಬೆಂಟಿಂಕ್ ಸತಿಸಹಗಮನವನ್ನು ನಿಷೇಧಿಸಿದನು. ದ್ವಾರಕಾನಾಥ್ ಠಾಕೂರ್ ತತ್ತ್ವಬೋಧಿನೀ ಸಭೆ ಹಾಗೂ ಅದೇ ಹೆಸರಿನ ಪತ್ರಿಕೆ ಸ್ಥಾಪಿಸಿದರು.

೧೮೫೭ರಲ್ಲಿ ಕೇಶವಚಂದ್ರ ಸೇನ್ ಬ್ರಹ್ಮಸಮಾಜದ ಆಚಾರ್ಯನಾದನು. ಬ್ರಹ್ಮಸಮಾಜವು ಒಡೆದು, ದೇವೇಂದ್ರನಾಥ್ ಠಾಕೂರ್ ಆದಿಬ್ರಹ್ಮಸಮಾಜ ಎಂಬ ಪಂಗಡಕ್ಕೆ ನಾಯಕರಾದರು. ಕೇಶವ ತನ್ನ ಮಗಳನ್ನು ರಾಜಕುಮಾರನೊಬ್ಬನಿಗೆ ಬಾಲ್ಯವಿವಾಹ ಮಾಡಿಕೊಟ್ಟುದರಿಂದ ಅವನ ಭಾರತವರ್ಷೀಯ ಬ್ರಹ್ಮಸಮಾಜವೂ ಒಡೆದು, ಸಾಧಾರಣ ಬ್ರಹ್ಮ ಸಮಾಜ ಸ್ಥಾಪನೆಯಾಯಿತು. ಇತ್ತ ಮುಂಬೈಯಲ್ಲಿ ೧೮೬೭ರಲ್ಲಿ ಸ್ಥಾಪಿತವಾದ ಪ್ರಾರ್ಥನಾ ಸಮಾಜವನ್ನು ಎಂ.ಜಿ.ರಾನಡೆ ಹಾಗೂ ಆರ್.ಜಿ. ಭಂಡಾರ್ಕರ್ ಮೊದಲಾದವರು ಜನಪ್ರಿಯಗೊಳಿಸಿದರು. ತಮ್ಮ ಸತ್ಯಾರ್ಥಪ್ರಕಾಶ ಪುಸ್ತಕ, ಶುದ್ಧಿ ಚಳುವಳಿ ಮತ್ತು ವಿಧವಾ ವಿವಾಹಕ್ಕೆ ಪ್ರೋತ್ಸಾಹಗಳಿಂದ ಪ್ರಖ್ಯಾತರಾದ ದಯಾನಂದ ಸರಸ್ವತಿಗಳ ಆರ್ಯಸಮಾಜ ಲಾಹೋರ್‌ನಲ್ಲಿ ಕೇಂದ್ರ ಕಚೇರಿ ಹೊಂದಿತ್ತು. ದಯಾನಂದ ಸರಸ್ವತಿಗಳು ವೇದಗಳಿಗೆ ಹಿಂತಿರುಗಿ ಎಂದು ಘೋಷಿಸಿದುದಲ್ಲದೆ, 'ಭಾರತ ಭಾರತೀಯರಿಗೆ' ಎಂದು ಮನದಟ್ಟು ಮಾಡಿಸಿದರು. ಶಿಷ್ಯ ಸ್ವಾಮಿ ಶ್ರದ್ಧಾನಂದರು ಅವರ ಕೆಲಸವನ್ನು ಮುಂದುವರಿಸಿ, ಗುರುಕುಲ ಆಶ್ರಮಗಳನ್ನು ಸ್ಥಾಪಿಸಿದರು. ಆರ್ಯಸಮಾಜ ಒಡೆದು, ಲಾಲಾ ಹಂಸರಾಜರು ಬೇರೆಯಾಗಿ ದಯಾನಂದ ಆಂಗ್ಲೋ ವೇದಿಕ್ ಶಾಲೆಗಳನ್ನು ಆರಂಭಿಸಿದರು. ಧಾರ್ಮಿಕ ಪಂಥಗಳಾದ ಈ ಎಲ್ಲ ಸಮಾಜಗಳ ಧ್ಯೇಯವು ಕ್ರೈಸ್ತ ಮಿಷನರಿಗಳು, ಆಧುನಿಕ ಶಿಕ್ಷಣದಿಂದ ತಮ್ಮ ಧರ್ಮದಲ್ಲಿ ತಿರಸ್ಕಾರ ಹೊಂದಿದ ಎಳೆಯರನ್ನು ವಿಚಾರ-ಆಚಾರಗಳಲ್ಲಿನ ವಿಸಂಗತಿಗಳನ್ನು ನಿರ್ಮೂಲಗೊಳಿಸಿದ ಆಧುನಿಕ ಹಿಂದೂಧರ್ಮದಲ್ಲಿ ಉಳಿಸಿಕೊಳ್ಳುವುದೇ ಆಗಿತ್ತು.

ನ್ಯೂಯಾರ್ಕ್‌ನಲ್ಲಿ ಮೇಡಂ ಬ್ಲವಾಟ್‌ಸ್ಕಿ ಮತ್ತು ಕರ್ನಲ್ ಓಲ್ಕಾಟ್‌ರಿಂದ ೧೮೭೫ರಲ್ಲಿ ಸ್ಥಾಪಿತವಾದ ಥಿಯೊಸಾಫಿಕಲ್ ಸೊಸೈಟಿ ಅಧ್ಯಕ್ಷೆ ಅನಿಬೆಸೆಂಟ್ ಈ ಕಾಲದಲ್ಲಿ ಭಾರತಕ್ಕೆ ಬಂದು, ಆಕೆ ವಸಾಹತು ವಿರೋಧಿ ಹೋರಾಟ, ಹೋಂರೂಲ್ ಚಳುವಳಿಗಳಲ್ಲಿ ಭಾಗವಹಿಸಿದಳು. ಕಲ್ಕತ್ತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷಳೂ ಆದಳು.

ಧರ್ಮ ಸಮನ್ವಯದ ಸಂತ ಶ್ರೀರಾಮಕೃಷ್ಣ ಪರಮಹಂಸರ ಶಿಷ್ಯರಾದ ಸ್ವಾಮಿ ವಿವೇಕಾನಂದರು ೧೮೯೩ರ ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಹಿಂದೂಧರ್ಮದ ಶ್ರೇಷ್ಠತೆಯನ್ನು ಪರಿಚಯಿಸಿ ಖ್ಯಾತರಾದುದಲ್ಲದೆ, ನ್ಯೂಯಾರ್ಕ್ ವೇದಾಂತ ಸಂಘ, ಮುಂದೆ ಶ್ರೀರಾಮಕೃಷ್ಣರ ತತ್ತ್ವ ಬೋಧನೆ, ಆಧ್ಯಾತ್ಮಿಕ ವಿಚಾರಗಳನ್ನು ಪ್ರಪಂಚಾದ್ಯಂತ ಹರಡಿದ ರಾಮಕೃಷ್ಣ ಮಿಷನ್ ಸ್ಥಾಪಿಸಿದರು. ಸ್ವಾಮಿ ವಿವೇಕಾನಂದರ ಶಿಷ್ಯೆ ಸೋದರಿ ನಿವೇದಿತಾ ಹಿಂದೂಸಮಾಜ ಜಾಗೃತಿಗೆ ಅನಿವಾರ್ಯವಾಗಿದ್ದ ಎಲ್ಲ ಕ್ಷೇತ್ರಗಳ ಉಜ್ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡು ಇತರರೂ ಉತ್ಸಾಹದಿಂದ ತೊಡಗುವಂತೆ ಪ್ರೇರಣೆ ನೀಡಿದುದಲ್ಲದೆ, ಆಕ್ರಮಣಕಾರಿ ಹಿಂದೂಧರ್ಮ ಎಂಬ ಹೊಸ ದರ್ಶನವನ್ನೇ ಆವಿಷ್ಕರಿಸಿದರು. ಹೆಣ್ಣುಮಕ್ಕಳ ಶಾಲೆಯನ್ನು ತೆರೆದು ಮಹಿಳೆಯರ ದೀನದಲಿತರ ಉದ್ಧಾರಕ್ಕಾಗಿ ಶ್ರಮಿಸಿ, ಸೇವಾಕಾರ್ಯಗಳನ್ನು ಸಂಘಟಿಸಿದರು.

ಭಾರತೀಯ ಇಸ್ಲಾಂ ವೃದ್ಧ ಪಿತಾಮಹ ಎಂದು ಹೆಸರಾದ ಸರ್ ಸಯ್ಯದ್ ಅಹ್ಮದ್ ಖಾನ್ ಅಲಿಘಡ ಚಳುವಳಿ ಸ್ಥಾಪಿಸಿದರು. ಇವರ ಶಾಲೆ ಕಾಲೇಜು ಆಗಿ, ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಾಯಿತು. ಮಿರ್ಜಾ ಗುಲಾಂ ಅಹಮ್ಮದ್‌ರ ಅಹಮ್ಮದೀಯ ಚಳವಳಿ, ಇನಾಯತುಲ್ಲಾ ಖಾನ್‌ರ ಖಕ್ಸಾರ್ ಚಳವಳಿ, ರಾಯ್ ಬರೇಲಿಯ ಸಯ್ಯದ್ ಅಹ್ಮದ್‌ರ ವಹಾಬಿ ಚಳವಳಿ, ಜ್ಯೋತಿಬಾ ಫುಲೆ ಅವರ ಸತ್ಯ ಶೋಧಕ ಸಮಾಜ, ನಾರಾಯಣ ಗುರು ಅವರ ಅರವಿಪ್ಪುರಮ್ ಚಳವಳಿ, ರಾಧಾಕಾಂತ ದೇವ್ ಅವರ ಧರ್ಮಸಭಾ, ಬೆಹರಾಂ ಜಿ ಅವರ ಸೇವಾಸದನ, ಶಿವನರೇನ್ ಅಗ್ನಿಹೋತ್ರಿಗಳ ದೇವ ಸಮಾಜ ಇವೆಲ್ಲ ಈ ಪರ್ವಕಾಲದ ಇತರ ಧರ್ಮ ಹಾಗೂ ಸಮಾಜ ಸುಧಾರಣಾ ಚಳವಳಿಗಳು.

ಬ್ರಿಟಿಷ್ ಆಳ್ವಿಕೆಯ ಪ್ರಾರಂಭದಲ್ಲಿ ಕಾಣದಿದ್ದ ಸಾಹಿತ್ಯದಲ್ಲಿನ ಬೆಳವಣಿಗೆ ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಕಂಡುಬಂದಿತು. ಇದನ್ನು ನವೋದಯ ಅಥವಾ ಹೊಸ ಹುಟ್ಟು ಎಂದು ಕರೆಯಬಹುದು. ಆದರ್ಶದ ಹುಚ್ಚು, ನವಿರಾದ ಭಾವನೆ

ಗಳು, ಆಶಾವಾದ, ಸಾಮಾಜಿಕ ಪರಿವರ್ತನೆಯ ಧ್ಯೇಯವಾದಿತ್ವ ಇದರ ಲಕ್ಷಣಗಳು. ಶ್ರೀರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಅರವಿಂದ ಘೋಷ್‌ರಂತಹ ಆಧ್ಯಾತ್ಮಿಕ ಗುರುಗಳು, ಬಂಕಿಮಚಂದ್ರ ಚಟ್ಟೋಪಾಧ್ಯಾಯ, ರವೀಂದ್ರನಾಥ ಠಾಕೂರ್ ಮೊದಲಾದವರು ಭಾರತದ ಎಲ್ಲ ಸಾಹಿತಿಗಳ ಮೇಲೆ ತಮ್ಮ ಪ್ರಭಾವ ಬೀರಿದರು. ಅಧ್ಯಾತ್ಮ, ದೇಶಭಕ್ತಿ, ಸಮಾಜ ಸುಧಾರಣೆ ಇವು ಅಂದಿನ ಸಾಹಿತ್ಯದ ಗುರಿಗಳು. ಬಿ.ವೆಂಕಟಾಚಾರ್ಯರು ಬಂಕಿಮಚಂದ್ರ ಮೊದಲಾದವರ ಕೃತಿಗಳನ್ನು ಅನುವಾದಿಸಿದರು. ಸ್ವಾಮಿ ವಿವೇಕಾನಂದರ ಪ್ರಭಾವವಂತೂ ಹಲವು ತಲೆಮಾರಿನ ಲೇಖಕರ ಮೇಲೆ ಆಗಿದೆ. ಅರವಿಂದರ ಪ್ರಭಾವವೂ ಕಡಿಮೆಯದಲ್ಲ. ಮೈಸೂರು ಪ್ರಾಂತದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ಕೆಂಪುನಾರಾಯಣ, ಬಸವಪ್ಪಶಾಸ್ತ್ರಿ, ಸೋಸಲೆ ಅಯ್ಯಾ ಶಾಸ್ತ್ರಿ ಮೊದಲಾದವರಿಗೆ ಆಶ್ರಯ ನೀಡಿ, ಅವರ ಸಾಹಿತ್ಯ ರಚನೆಗೆ ಪೋಷಕರಾದರು. ಮುಂಬೈ ಕರ್ನಾಟಕದಲ್ಲಿ ಡೆಪ್ಯುಟಿ ಚೆನ್ನಬಸಪ್ಪನವರು, ಗಂಗಾಧರ ಮಡಿವಾಳೇಶ್ವರ ತೂರಮರಿ, ಧೋಂಡೋ ನರಸಿಂಹ ಮುಳಬಾಗಿಲ, ವೆಂಕಟರಂಗೋ ಕಟ್ಟಿ, ಶಾಂತಕವಿ ಮೊದಲಾದವರು ಸಾಹಿತ್ಯ ಕೃತಿಗಳನ್ನು ರಚಿಸಿದರು. ಸಾಂಪ್ರದಾಯಿಕ ಶೈಲಿಯಲ್ಲಿ ಇದ್ದರೂ, ಮುದ್ದಣ, ಬೆಳ್ಳಾವೆ ನರಹರಿ ಶಾಸ್ತ್ರೀ, ಮುಳಿಯ ತಿಮ್ಮಪ್ಪಯ್ಯ, ಡಿ.ವಿ.ಜಿ. ಮೊದಲಾದವರಿಂದ ಹೊಸಗನ್ನಡ ಕಾವ್ಯದ ಆವಿರ್ಭಾವ ಆಯಿತು.

ನಾಟಕರಂಗವನ್ನು ನೋಡಿದಾಗ ದೇವೇಂದ್ರನಾಥ ಠಾಕೂರ್, ಗಿರೀಶಚಂದ್ರ ಘೋಷ್, ರವೀಂದ್ರನಾಥ ಠಾಕೂರ್ ಮೊದಲಾದವರು ಬಂಗಾಳದಲ್ಲಿ ಹೊಸತನ್ನು ತಂದರು ಹಾಗೂ ಇತರ ಭಾಷೆಗಳ ನಾಟಕಗಳ ಮೇಲೆ ಪ್ರಭಾವ ಬೀರಿದರು. ಕನ್ನಡದಲ್ಲಿ ಶಾಂತಕವಿಗಳು ಈ ಕಾಲದಲ್ಲಿ ನಾಟಕರಂಗವನ್ನು ಕಟ್ಟಿ ಬೆಳೆಸಿದ್ದನ್ನು ಕಾಣುತ್ತೇವೆ. ಇವರೆಲ್ಲರೂ ಆಂಗ್ಲರಿಗಿಂತ ತಮ್ಮ ತಮ್ಮ ಭಾಗದಲ್ಲಿದ್ದ ಹಿಂದಿನ ನಾಟಕ ಪರಂಪರೆಯಿಂದಲೇ ಪ್ರಭಾವಿತರಾಗಿ, ಭಾರತೀಯತ್ವವನ್ನು ಮೆರೆದರು.

ಭಕ್ತಿಪಂಥದವರು ಸಂಗೀತಕ್ಕೆ ಹೆಚ್ಚು ಪ್ರಾಮುಖ್ಯ ನೀಡಿದರು. ಶ್ರೀರಾಮಕೃಷ್ಣ ಪರಮಹಂಸರು ಸ್ವತಃ ಹಾಡುತ್ತಿದ್ದುದಲ್ಲದೆ, ಸಂಗೀತವನ್ನು ಆಸ್ವಾದಿಸುತ್ತಿದ್ದರು. ಸ್ವಾಮಿ ವಿವೇಕಾನಂದರು 'ಸಂಗೀತ ಕಲ್ಪತರು' ಎಂಬ ಹಾಡುಗಳ ಸಂಗ್ರಹವನ್ನು ಪ್ರಕಟಿಸಿದ್ದರು. ಬಂಕಿಮಚಂದ್ರನ ಆನಂದ ಮಠದಲ್ಲಿನ 'ವಂದೇ ಮಾತರಂ' ಗೀತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಭಾವಿ ಪಾತ್ರ ವಹಿಸಿತು. ಭಾರತೀಯ ಸಂಗೀತವನ್ನು ವರ್ಗೀಕರಿಸಿದ ವಿಷ್ಣು ನಾರಾಯಣ ಭಾತ್‌ಖಂಡೆ ಬ್ರಿಟಿಷರ ಸೊಕ್ಕಿನಿಂದ ಸೊರಗಿದ್ದ ಹಿಂದೂಸ್ತಾನಿ ಸಂಗೀತದ ಅಳಿದುಳಿದ ಭಾಗಗಳನ್ನು ಕಲೆಹಾಕಿ, ನಿರ್ದಿಷ್ಟ ಸ್ವರೂಪವನ್ನು ಕಲ್ಪಿಸಿಕೊಟ್ಟರು. ಸ್ವರಮಾಲಿಕಾ, ಶ್ರೀಮಲ್ಲಕ್ಷಣ ಸಂಗೀತಂ ಬರೆದುದಲ್ಲದೆ, ಅರ್ಥವಿವರಣೆಗಳನ್ನೂ ಬರೆದರು. ನಮ್ಮ ಸಂಸ್ಕೃತಿ ಪರಂಪರೆಗಳನ್ನು ಉಳಿಸಿಕೊಳ್ಳ ಬೇಕೆಂಬ ಹಂಬಲ, ಇತಿಹಾಸ ಪ್ರಜ್ಞೆ ಆ ಕಾಲದ ಇತರರಲ್ಲೂ ಕಾಣುತ್ತದೆ. ಹೀಗೆ ಸಂಗೀತ, ಚಿತ್ರಕಲೆಗಳ ಮೇಲೆ ಪ್ರಭಾವ ಬೀರಿದವರಲ್ಲಿ ಗಗನೇಂದ್ರನಾಥ್ ಠಾಕೂರ್, ಜ್ಯೋತಿರಿಂದ್ರನಾಥ್ ಠಾಕೂರ್ ಅಲ್ಲದೆ, ಅನಂತರದ ರವೀಂದ್ರನಾಥ್ ಠಾಕೂರ್ ಕೂಡ ಇದ್ದಾರೆ. ಆಧುನಿಕ ಭಾರತೀಯ ಕಲಾಪಂಥ ಕೊಲ್ಕತ್ತದಲ್ಲಿ ಪ್ರಾರಂಭವಾಯಿತು. ಪಾಶ್ಚಿಮಾತ್ಯ ಸಂಪ್ರದಾಯ, ತಂತ್ರಗಳನ್ನು ಬಳಸಿದ ರವಿವರ್ಮ ತನ್ನ ಪೌರಾಣಿಕ ಪ್ರಸಂಗಗಳ ವರ್ಣಚಿತ್ರಗಳಿಂದ ಪ್ರಖ್ಯಾತನಾದರೂ, ಭಾರತೀಯತೆಗೆ ಒತ್ತು ನೀಡಿದ್ದು ಬೆಂಗಾಲ್ ಸ್ಕೂಲ್ ಆಫ್ ಆರ್ಟ್ಸ್.

ಈ ಸಾಂಸ್ಕೃತಿಕ ಮುಂಬೆಳಗು ಏಕೆ ಮುಂದೆ ಉಜ್ವಲತೆಯನ್ನು ಪಡೆಯಲಿಲ್ಲ ಎನ್ನುವುದಕ್ಕೆ ಹಲವು ಕಾರಣಗಳಿವೆ. ರಾಜಕೀಯ ವ್ಯವಸ್ಥೆ ಏನೇ ಇದ್ದರೂ, ಜನಾಂಗವೊಂದು ತನ್ನ ಸಾಂಸ್ಕೃತಿಕ ಆತ್ಮಗೌರವವನ್ನು ಉಳಿಸಿಕೊಳ್ಳುವುದು ಸಾಧ್ಯ ಎನ್ನುವುದು ಎಂಟುನೂರು ವರ್ಷಗಳ ಮುಸ್ಲಿಂ ಆಳ್ವಿಕೆಯಲ್ಲೂ ಹಿಂದೂಗಳು ತಮ್ಮ ಪಾಡಿಗೆ ತಮ್ಮ ಧರ್ಮ, ಸಂಸ್ಕೃತಿಗಳನ್ನು ಕಾಪಾಡಿಕೊಂಡು ಬಂದಿದ್ದನ್ನು ಚರಿತ್ರೆ ತಿಳಿಸುತ್ತದೆ. ಈ ಅಸ್ಮಿತೆ ನಮ್ಮ ಪ್ರಜ್ಞೆಯಿಂದ ಮಾಸಿದ್ದು ಬ್ರಿಟಿಷರ ಆಳ್ವಿಕೆಯಲ್ಲಿ. ಆದರೂ ಬ್ರಿಟಿಷರಿಂದ ಒಳ್ಳೆಯದೇ ಆಗಿದೆ ಶೂದ್ರರು, ಅಸ್ಪೃಶ್ಯರು ಕಾನೂನಿನಲ್ಲಿ ಸಮಾನರಾದರು, ಶಿಕ್ಷಣ ಪಡೆದು ಅಭಿವೃದ್ಧಿ ಹೊಂದಿದರು ಎನ್ನುವ ಭಾವ ಜನಸಾಮಾನ್ಯರಲ್ಲಿದೆ. ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಏಕರೂಪತೆಯನ್ನು, ತನ್ಮೂಲಕ ಸ್ಥಿರತೆಯನ್ನು ತಂದರೆ ಮಾತ್ರ ಸಾಮ್ರಾಜ್ಯ ಶಾಹಿಯ ನಿರ್ಮಾಣ ಸಾಧ್ಯ ಎಂದು ಬ್ರಿಟಿಷರು ಅರಿತಿದ್ದರು. ಈ ಸಿದ್ಧಾಂತದಿಂದ ಆಡಳಿತಗಾರರು ವೇದಾಂತದ ಶಿಷ್ಟ ಧರ್ಮ ವೊಂದನ್ನು ಮಾತ್ರ ಮಾನ್ಯ ಮಾಡಿ, ಅದೇ ಪರಮ ಎನ್ನಿಸಿ, ಭಾರ ತದ ಬಹುಮುಖಿ ಸಂಸ್ಕೃತಿ-ಧರ್ಮಗಳ ಪರಂಪರೆ ನಾಶವಾಗಿ ಹೋಗುವಂತೆ ಮಾಡಿದರು ಎನ್ನುತ್ತಾರೆ ಡಿ.ಆರ್.ನಾಗರಾಜ್. ವೆಲ್ಲೆಸ್ಲಿ ಸ್ಥಾಪಿಸಿದ ಪೋರ್ಟ್ ವಿಲಿಯಂ ಕಾಲೇಜು ಮತ್ತು ಬ್ರಹ್ಮಸಮಾಜಗಳು ವೇದಾಂತ ತತ್ತ್ವಕ್ಕೇ ಪ್ರಾಧಾನ್ಯ ನೀಡಿದುವು.

ವಿಚಿತ್ರವೆಂದರೆ ಒಂದೇ ಧರ್ಮವಾಗಿ ಮುನ್ನೆಲೆಗೆ ಬಂದ ಈ ವೇದಾಂತದ ಒಳಗಿಂದಲೆ ವಿದೇಶಿ ದಬ್ಬಾಳಿಕೆಯ ವಿರೋಧದ ಚೈತನ್ಯ ಬಂದಿತು. ೧೮ನೆಯ ಶತಮಾನದಲ್ಲಿ ಎಲ್ಲ ಹಳ್ಳಿಗಳಲ್ಲೂ ದೇಶೀ ಶಿಕ್ಷಣ ಕೊಡುವ ಕೂಲಿ ಮಠಗಳು ಇದ್ದ ಸ್ಥಿತಿಗೆ ಮರಳಬೇಕೆಂದು ಗಾಂಧೀಜಿ ಆಗ್ರಹಿಸಿದರು. ವಿಕೃತ ಆಧುನಿಕೀಕರಣದಿಂದ ಕಮ್ಮಾರ, ನೇಕಾರ, ಬಡಗಿ ಮೊದಲಾದ ಜಾತಿಗಳ ಸೊತ್ತಾಗಿದ್ದ ದೈನಂದಿನ ಜೀವನದ ತಂತ್ರಜ್ಞಾನ ವಿಭಾಗಗಳ ಪರಿಣತಿಯು ನಾಶವಾದದ್ದರಿಂದ ದೇಶ ಬಡವಾದದ್ದನ್ನು, ಬಹುಸಂಖ್ಯಾತರ ಬದುಕು ಅಸಹನೀಯವಾದದ್ದನ್ನು ನಮ್ಮ ಚಿಂತಕರು ಗುರುತಿಸಿಕೊಂಡರು. ಆದರೂ 'ಯೋಜನೆಯ ಯಜ್ಞದಲಿ ವಪೆಯ ತಿಂದವರು', ಅಭಿವೃದ್ಧಿಯ ಲಾಭ ಪಡೆಯುತ್ತಿರುವವರು — ಮೆಕಾಲೆಯ ಮಕ್ಕಳೇ ಆಗಿ ಮುಂದುವರಿ

TÜV INDIA ISO 9001 Certified

MEMBER EASA The Electro•Mechanical Authority

Rajamane®
SINCE 1975
Your trusted partner

# RAJAMANE & HEGDE SERVICES PVT. LTD.

*...carving a niche*

## Domain Leader in Service Offerings








**Major Repair Works at Tumakuru**

**BENGALURU : Unit - I/H.O. :** Whitefield Road, Mahadevapura Post, **Bengaluru** - 560 048. Ph. : +91-80-28524252/ 28524409 / 950, Fax : +91-80-41163117, Cell : 9900592264/9900592262 e-mail : rewinding@rajamane.com
**HUBBALLI : Unit - II :** C-181/182, Indl. Est., Gokul Road, **Hubballi** - 580 030. Ph: 0836 - 2334238, Cell : +91 9900592267. e-mail : rhshblccd@gmail.com
**TUMAKURU : Major Works :** 142 A, Antharasanahalli 2nd Phase, K.I.A.D.B. Industrial Area, **Tumakuru** - 572 106. Ph: 0816 - 2211928/29, Fax : 0816 - 2211930. e-mail : rhstumkur@gmail.com

www.rajamanehegde.com

# ಭಾರತೀಯ ಸಂಸ್ಕೃತಿಯಲ್ಲಿ ಆದರ್ಶ, ಮೌಲ್ಯಗಳು

ಸ್ವಾಮಿ ಶಿವಕಾಂತಾನಂದ

ಯಾವ ಒಂದು ಸಮಾಜದಲ್ಲಿ ಆದರ್ಶ, ಮೌಲ್ಯಗಳು ಜನರ ಜೀವನಕ್ರಮವನ್ನು ರೂಪಿಸುವುದೋ, ಅಲ್ಲ ಸಂಸ್ಕೃತಿ ಅತ್ಯುನ್ನತವಾಗಿರುತ್ತದೆ. ನಮ್ಮ ದೇಶದ ಸಾಮಾಜಿಕ ಸಂದರ್ಭದಲ್ಲಿ ಇವು ವಹಿಸುವ ಪಾತ್ರವನ್ನು ಕುರಿತು ಇಲ್ಲಿ ಬರೆದಿರುವ ಲೇಖಕರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸಂಚಾಲಕರಾಗಿದ್ದಾರೆ. ಅವರು ಉತ್ತಮ ವಾಗ್ಮಿ ಹಾಗೂ ಬರಹಗಾರರು.

ಇಂದಿನ ಆಧುನಿಕ ಯುಗದ ಮೌಲ್ಯಗಳು ವೈಜ್ಞಾನಿಕ-ತಾಂತ್ರಿಕತೆ ಪ್ರಗತಿಯ ಮತ್ತು ಬಂಡವಾಳಷಾಹಿ ಧೋರಣೆಯ ಹಿಂದೆ ಬಿದ್ದು, ಹಿಂದಿನ ಕಾಲದ ಮೌಲ್ಯಗಳಲ್ಲಿ ಕೆಲವನ್ನು ಅಳವಡಿಸಿ ಹಲವನ್ನು ಅಳಿಸಿ ಕಡೆಗಣಿಸಿ ಮುನ್ನಡೆಯುತ್ತಿದೆ. ಆಧುನಿಕ ಜಗತ್ತಿನ ವಿಶ್ವನಾಗರಿಕರಾದ (ಗ್ಲೋಬಲ್ ಸಿಟಿಜನ್ಸ್) ನಮಗೆ ನಮ್ಮ ಭಾರತೀಯ ಸಂಸ್ಕೃತಿಯ ಆದರ್ಶ, ಮೌಲ್ಯಗಳ ಪ್ರಸ್ತುತತೆ ಮತ್ತು ಆವಶ್ಯಕತೆಗಳನ್ನು ಕುರಿತು ಸಂಶಯವಷ್ಟೇ ಅಲ್ಲ, ಅಸಡ್ಡೆ ಯನ್ನೂ ಕೂಡ ಬೆಳೆಸಿಕೊಂಡಿದ್ದೇವೆ. ದೇಶದ ಪ್ರಸಿದ್ಧ ವಿಶ್ವವಿದ್ಯಾ ನಿಲಯಗಳಲ್ಲಿ ಇಂದಿನ ಯುವಕರು ತಾಳಿರುವ ಮನೋ ಭಾವನೆಗಳನ್ನು ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಉದಾತ್ತವಾದ ಮತ್ತು ಅಷ್ಟೇ ಉನ್ನತ ಸ್ಥಿತಿಗೆ ಮಾನವನನ್ನು ಕೊಂಡೊಯ್ಯುವ ಎಲ್ಲಾ ಮೌಲ್ಯಾದರ್ಶಗಳನ್ನು ಭಾರತೀಯ ಸಂಸ್ಕೃತಿಯು ಯುಗ ಯುಗಗಳಿಂದಲೂ ಕಾಪಾಡಿಕೊಂಡು ಬರುತ್ತಿದೆ. ನಮ್ಮ ದೇಶವೂ ವಿಶಾಲ, ಸಂಸ್ಕೃತಿಯೂ ವಿಶಾಲ, ವ್ಯಕ್ತಿ ಆದರ್ಶಗಳೂ ವಿಪುಲ, ಮೌಲ್ಯಗಳೂ ಹೇರಳ. ಸಾವಿರಾರು ಶ್ರೇಷ್ಠ ವ್ಯಕ್ತಿಗಳ ಜ್ವಲಂತ ಉದಾಹರಣೆಗಳಿದ್ದರೂ, ಬೆರಳೆಣಿಕೆಯಷ್ಟು ದೋಷಗಳಿಗೇ ಜೋತು ಬಿದ್ದು ಇಡೀ ಭಾರತೀಯ ಸಂಸ್ಕೃತಿಯನ್ನೇ ನಿರ್ನಾಮ ಮಾಡಬೇಕೆಂಬ ಕ್ರೋಧವನ್ನು ಆಚರಣೆ, ಘೋಷಣೆ ಮತ್ತು ಬರಹಗಳ ಮೂಲಕ ಪ್ರಕಟಿಸುತ್ತಿದ್ದಾರೆ. ಇದಕ್ಕಾಗಿ ನಾವು ಭಾರತೀಯ ಸಂಸ್ಕೃತಿಯಲ್ಲಿರುವ ಇಂದಿಗೂ ಪ್ರಸ್ತುತವಾಗಿರುವ ಆದರ್ಶ ಮತ್ತು ಮೌಲ್ಯಗಳ ಬಗ್ಗೆ ಅರಿತುಕೊಳ್ಳಬೇಕು.

ಇಂದಿನ ಪ್ರಪಂಚ ಹೇಗೆ ಮುಂದುವರೆಯುತ್ತಿರುವುದನ್ನು ನಾವು ಹೇಗೆ ಕಣ್ಣಾರೆ ಕಾಣುತ್ತೇವೆಯೋ ಮಾನವನ ಆಂತರಿಕ ಪ್ರಕೃತಿಯೂ ಸಹ ಹಾಗೆಯೇ ಅಭಿವೃದ್ಧಿಶೀಲವಾಗಿದೆ. ಆಂತರಿಕ ಹಾಗು ಬಾಹ್ಯ ಮೌಲ್ಯಗಳ ಬೆಳವಣಿಗೆಗೆ ಆದರ್ಶ ಪುರುಷರೇ ಬೆನ್ನೆಲುಬು. ಈ ನಾಗರಿಕತೆಯು ಶ್ರೇಷ್ಠ ಮೌಲ್ಯಗಳನ್ನು ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಆಧ್ಯಾತ್ಮಿಕ ಸ್ತರಗಳಲ್ಲಿ ನೀಡಿದೆ. ಮಹಾಭಾರತದಲ್ಲಿ '**ಕಃ ಪಂಥಾ**' ಎಂಬ ಯಕ್ಷಪ್ರಶ್ನೆಗೆ '**ಮಹಾಜನಾಃ ಯೇನ ಗತಃ ಸ ಪಂಥಾ**' ಎಂದು ಧರ್ಮರಾಜನು ಉತ್ತರಿಸುತ್ತಾನೆ. ವಿಶ್ವದ ಯಾವುದೇ ಸಂಸ್ಕೃತಿಯ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಶಾಶ್ವತವಾದ ಸುಖಕ್ಕಾಗಿ, ಕ್ಷುದ್ರ ತೃಷ್ಣಾ ತ್ಯಾಗ ಮತ್ತು ಮೌಲ್ಯಾಧಾರಿತ ನಿತ್ಯಜೀವನದ ಆವಶ್ಯಕತೆ ಗೋಚರಿಸುತ್ತದೆ. ಕಾಮನೆಯ ಪ್ರಲೋಭನೆಯ ಎದುರು ಸಂಯಮಹೀನರಾದಾಗ, ಸ್ವಾರ್ಥ, ಕ್ರೋಧ ಇಂದ್ರಿಯ ಲಾಲಸೆಗಳಿಂದ ವಿಕೃತರಾದಾಗ ಉಂಟಾದ ಅನಿಷ್ಟ ಪರಿಣಾಮಗಳಿಂದ ಪಾಠ ಕಲಿತು ಮೌಲ್ಯಜೀವನದ ಆವಶ್ಯಕತೆಯನ್ನು ಕಂಡು ವ್ಯವಸ್ಥೆಗಳು ಮಾರ್ಪಾಟಾದ ವಿವರಗಳು ಇತಿಹಾಸದಲ್ಲಿ ನಮಗೆ ಸ್ಪಷ್ಟವಾಗಿ ದೊರೆಯುತ್ತವೆ. ಅತ್ಯಂತ ಶ್ರೇಷ್ಠ ಮೌಲ್ಯಾದರ್ಶಗಳನ್ನು ವೈಯುಕ್ತಿಕ ಮತ್ತು ಸಾಮಾಜಿಕ ಸ್ತರಗಳ ಪ್ರತಿಯೊಂದು ಹೆಜ್ಜೆಯಲ್ಲೂ ಮೈಗೂಡಿಸಿಕೊಂಡು ಅತ್ಯಂತ ಪುರಾತನವಾದರೂ ಹಿರಿಮೆ ಗರಿಮೆಗಳನ್ನು ಯುಗಯುಗಗಳಲ್ಲಿಯೂ ಕಾಪಾಡಿಕೊಂಡು ಹೋಗುವ ಒಂದು ಕ್ರಮಬದ್ಧ ವ್ಯವಸ್ಥೆಯನ್ನು ನಿರೂಪಿಸಿದ ಹೆಗ್ಗಳಿಕೆ ಭಾರತ ಸಂಸ್ಕೃತಿಗೆ ಸಲ್ಲುತ್ತದೆ.

ಜೀವನವೇ ಒಂದು ಯಜ್ಞ. ಮನುಷ್ಯರೆಲ್ಲರೂ ಇದರಲ್ಲಿ ಅರ್ಪಣಾಭಾವದಿಂದ, ಧನ್ಯತೆಯಿಂದ ಬಾಳಬೇಕೆಂಬ ಸುಂದರ ಕಲ್ಪನೆಯನ್ನು ನಮ್ಮ ಶ್ರುತಿ ಸ್ಮೃತಿಗಳು ನೀಡಿವೆ. ಜಗತ್ತಿನ ಎಲ್ಲ ಸಂಸ್ಕೃತಿಯಲ್ಲಿಯೂ ಆದರ್ಶಮೌಲ್ಯಗಳು ಸಿದ್ಧಾಂತ ರೂಪದಲ್ಲಿ ಅಥವಾ ಶ್ರೇಷ್ಠ ವ್ಯಕ್ತಿಗಳ ಪರಿಪೂರ್ಣ ಜೀವನಾದರ್ಶಗಳ ರೂಪದಲ್ಲಾಗಲಿ ಇರುತ್ತದೆ. ಸಂಸ್ಕೃತಿಯ ಶಾಶ್ವತತೆ ಇರುವುದೇ ಮೌಲ್ಯಗಳ ಪರಿಪಾಲನೆಯಲ್ಲಿ. ಸ್ವಯಂ ಆಚರಿಸಿದ ಆದರ್ಶವನ್ನು ಇತರರಿಗೆ ತೋರಿಸುವುದೇ ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿಯಾಗಿರುತ್ತದೆ. ಭಾರತೀಯ ಸಂಸ್ಕೃತಿಯು ಋಷಿ, ಮುನಿಗಳ ಮತ್ತು ಆರ್ಯ ಜನರ ಆದರ್ಶ ಜೀವನದ ಇತಿಹಾಸ. '**ಬಹುಜನ ಹಿತಾಯ ಬಹುಜನ ಸುಖಾಯ**' ಎಂಬ ಆದರ್ಶವು ವಿಶ್ವಕ್ಕೆ ನಾವು ನೀಡಿದ ಒಂದು ಅಮೂಲ್ಯ ಕೊಡುಗೆ. ವೈಯುಕ್ತಿಕ ಸುಖತ್ಯಾಗ, ಪಾರಮಾರ್ಥಿಕ ಪ್ರಾಪ್ತಿ ಮತ್ತು ಸಾಮಾಜಿಕ ಸ್ವಾಸ್ಥ್ಯತೆಯನ್ನು ಒಳಗೊಂಡಿರುವ ಮೌಲ್ಯಗಳು ಕೇವಲ ಗ್ರಂಥ ಮತ್ತು ವಿಚಾರವೇದಿಕೆಯಲ್ಲಿರದೆ ಆಚಾರಕ್ಕೂ ತಂದಿರುವ ನಾಗರಿಕತೆ ನಮ್ಮದು. ಈ ನಾಗರಿಕತೆಯ ಶ್ಲಾಘನೀಯ ಸಾಧನೆಗೆ ಮತ್ತು ಆದರ್ಶಕ್ಕೆ ಆಧ್ಯಾತ್ಮಿಕ ವ್ಯಕ್ತಿಗಳದ್ದೇ ಸಿಂಹಪಾಲು. ನಮ್ಮ ಸಾಹಿತ್ಯ, ನಾಟ್ಯ, ಶಿಲ್ಪ ಸಂಗೀತ ಮುಂತಾದ ಕಲೆಯಲ್ಲಿಯೂ ಸಹ

ಧಾರ್ಮಿಕತೆ ಮತ್ತು ಆಧ್ಯಾತ್ಮಿಕತೆಯೇ ಹಾಸುಹೊಕ್ಕಾಗಿರುತ್ತದೆ. ಅಶ್ಲೀಲತೆ ಮತ್ತು ಅಪ್ರಾಮಾಣಿಕತೆಯುಳ್ಳ ಕಲಾ ಪ್ರದರ್ಶನಗಳ ಆವಿಷ್ಕಾರದಲ್ಲಿ ಅಭಿರುಚಿ ಇಲ್ಲವೆಂದೇ ಹೇಳಬೇಕು. ಕಲೆಯ ಅಭಿವ್ಯಕ್ತಿಯೂ ಸಹ ಧರ್ಮಾರ್ಥಕಾಮಮೋಕ್ಷವನ್ನು ಮೀರಿರುವುದಿಲ್ಲ. ಸಾಮಾಜಿಕತೆಯ ಅತ್ಯಾವಶ್ಯಕ ಬುನಾದಿಯೇ ಮೌಲ್ಯ. ಈ ಮೌಲ್ಯವೆಂಬುದು ನೀತಿ ನಿಯಮಗಳ ಸಿದ್ಧಾಂತವಿಲ್ಲದೆ ಇರುವುದಿಲ್ಲ. ಇದು ಮಾನವನ ವಿಕಾಸವನ್ನು, ಸಂಸ್ಕೃತಿ, ಸಾಮಾಜಿಕ ಸುಧಾರಣೆಗಳನ್ನು ಉಂಟುಮಾಡುತ್ತದೆ. ಭಾರತವು ಆಧ್ಯಾತ್ಮಿಕ ಜಗತ್ತಿನಲ್ಲಿ ಸದಾ ಮುನ್ನಡೆಯುತ್ತಿರುವ ಜನಾಂಗವಾಗಿರುವುದಕ್ಕೆ ನಿರಂತರ ಮೌಲ್ಯ ಪಾಲನೆಯೂ ಒಂದು ಕಾರಣ. ಭಾರತವನ್ನು ಧರ್ಮಭೂಮಿ ಎಂದು ಕರೆಯುತ್ತೇವೆ. ಧರ್ಮವೇ ಭಾರತದ ಜೀವಾಳ. ಈ ಶ್ರೇಷ್ಠವಾದ ಸಂಸ್ಕೃತಿಯ ಉನ್ನತ ಮೌಲ್ಯಗಳನ್ನು ಆಚರಣೆಗೆ ತರುವುದನ್ನೇ ಧರ್ಮವೆನ್ನುತ್ತೇವೆ. ಸರಳ ಜೀವನ, ಉಚ್ಚ ವಿಚಾರ ಇದು ನಮ್ಮ ಸಂಸ್ಕೃತಿಯ ತಿರುಳು.

### ವೇದಗಳಲ್ಲಿ ಮೌಲ್ಯಗಳು

ಭಾರತೀಯ ಸಂಸ್ಕೃತಿಯ ತಳಹದಿ ವೇದಗಳು. ಧರ್ಮವೇ ವಿಶ್ವದ ಮೂಲ ಮತ್ತು ನಮ್ಮ ಎಲ್ಲಾ ಆಚರಣೆಗಳ ತಳಹದಿ.

**ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ । ಲೋಕೇ ಧರ್ಮಿಷ್ಠಂ ಪ್ರಜಾ ಉಪಸರ್ಪಂತಿ ॥** *(ತೈ. ಆ. ೧೦-೬೩)*

ಧರ್ಮವೇ ವಿಶ್ವದ ಬುನಾದಿ. ಲೋಕದಲ್ಲಿ ಜನರು ಧರ್ಮಿಷ್ಠನನ್ನು ಆಶ್ರಯಿಸಿದ್ದಾರೆ.

ವೇದವು ಸ್ಥೂಲ ಆಭೋಗದಿಂದ ಅತೀತದೆಡೆಗೊಯ್ಯುವ ರಶ್ಮಿಪಂಥಗಳು. ದೇವ ಮತ್ತು ಮಾನವಗಿರುವ ಸಂಬಂಧ, ಒಡಂಬಡಿಕೆಗಳ ವಿವರ. ನಮ್ಮ ಮನದಲ್ಲಿಯೂ, ಹೊರ ಪ್ರಪಂಚದಲ್ಲಿಯೂ ಇರುವ ದೇವಾಸುರರ ನಡುವೆ ಆಮುಕ್ತಿವರೆಗೂ ಬಿಡದೆ ನಡೆಯುವ ನಿರಂತರ ಯುದ್ಧಕ್ಕೆ ಬೇಕಾದ ಶ್ರುತಿವಾಕ್ಯವೆಂಬ ಮಾರ್ಗದರ್ಶನ. ಇಡೀ ಸೃಷ್ಟಿಯೇ ಒಂದು ಯಜ್ಞ, ಇಲ್ಲಿ ನಿರಂತರವಾಗಿ ಒಂದು ವಸ್ತುವು ಅಗ್ನಿಯಾಗಿ ಮತ್ತೊಂದು ಸಮಿತ್ತಾಗಿ ತನ್ನತನವನ್ನು ಕಳೆದುಕೊಂಡು ನವೀನತೆಯನ್ನು ಪಡೆಯುತ್ತಿದೆ. ಮಾನವನ ಸರ್ವತೋಮುಖ ಅಭಿವೃದ್ಧಿ, ಇಹ-ಪರದಲ್ಲಿ ಸುಖವನ್ನು ಪಡೆಯಲು ಕಠಿಣ ಸಾಧನೆ ಮತ್ತು ಪ್ರತಿಯೊಂದು ಕಾರ್ಯಗಳನ್ನೂ ಯಜ್ಞಗಳೆಂದು ಅರ್ಪಣಾ ಭಾವನೆಯಲ್ಲಿ ಮಾಡುವ ಉನ್ನತ ಧ್ಯೇಯದ ಹಿನ್ನಲೆಯಲ್ಲಿ, ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ ಮೌಲ್ಯಗಳು ಆದರ್ಶಗಳು ಹೇಗಿರಬೇಕೆಂದು ಇದು ಸಾರುತ್ತದೆ. ಅಷ್ಟೇ ಅಲ್ಲ ಇವೆಲ್ಲವನ್ನೂ ಕೊನೆ ಭಾಗಗಳಲ್ಲಿ ನಶ್ವರವೆಂದು ಹಳಿದು ಪಾರಮಾರ್ಥಿಕದೆಡೆಗೆ ಹೆಜ್ಜೆಯನ್ನು ಹಾಕಲು ವೇದಾಂತಗಳ ಉಪದೇಶವನ್ನೂ ನೀಡುತ್ತದೆ.

### ವೈಯುಕ್ತಿಕ ಮೌಲ್ಯ

೧) ಛಾಂದೋಗ್ಯೋಪನಿಷತ್ತು, '**ಅಥ ಯತ್ತಪೋ ದಾನಮಾರ್ಜವಮಹಿಂಸಾ ಸತ್ಯವಚನಮಿತಿ ತಾ ಅಸ್ಯ ದಕ್ಷಿಣಾಃ**' *(ಛಾಂ. ೩.೧೭.೪)*. ದಾನ, ನೇರ ನಡತೆ, ಅಹಿಂಸೆ, ಸತ್ಯ ವಚನ, ಮುಂತಾದ ಸದ್ಗುಣಗಳನ್ನು ಬೋಧಿಸುತ್ತದೆ. ೨) **ಸತ್ಯಂ ವದ** *(ತೈ. ಉಪ. ೧.೧೧.೧)* **ಸತ್ಯಂ ಮ ಆತ್ಮಾ** *(ತೈ. ಬ್ರಾ. ೩-೭-೭)*. 'ಸತ್ಯವನ್ನು ಹೇಳು', 'ಸತ್ಯವೇ ನನ್ನಾತ್ಮ.' ಶ್ರೀರಾಮ ಕೃಷ್ಣರು ತಿಳಿಸುತ್ತಾರೆ ಕಲಿಯುಗದಲ್ಲಿ ಸತ್ಯವಾಕ್ಯ ಪರಿಪಾಲನೆಯೇ ತಪಸ್ಸೆಂದು. ಸತ್ಯವ್ರತಿಗಳಿಂದ ಸಮಾಜಕ್ಕೂ ಒಳ್ಳೆಯದಾಗುತ್ತದೆ. ೩) ವೇದಗಳಲ್ಲಿ ಸೋಮಾರಿತನ, ಕರ್ಮದಿಂದ ವಿಮುಖರಾಗುವ ಮಾತೇ ಇಲ್ಲ. '**ನಾನಾಶ್ರಾಂತಸ್ಯ ಶ್ರೀರಸ್ತಿ**' *(ಐ.ಬ್ರಾ. ೭.೩೩.೩)*. ಪ್ರಯತ್ನವಿಲ್ಲದವನಿಗೆ ಐಶ್ವರ್ಯವಿಲ್ಲ.' '**ಚರನ್ವೈ ಮಧು ವಿಂದತಿ**' *(ಐ. ಬ್ರಾ. ೭.೩೩.೩-೧೫)* 'ಶ್ರಮಿಸುವವನೇ ಅಮೃತವನ್ನು ಪಡೆಯುತ್ತಾನೆ.' ಇವೆಲ್ಲವನ್ನೂ ಬ್ರಹ್ಮಚರ್ಯಾಶ್ರಮದಲ್ಲಿಯೇ ಬಾಲಕನು ಪಡೆಯುತ್ತಾನೆ. ಗುರುಕುಲದಲ್ಲಿ ಶಿಸ್ತು, ನಿಯಮಬದ್ಧವಾದ ದಿನಚರಿ, ಇಂದ್ರಿಯ ಸಂಯಮವೇ ಮುಖ್ಯವಾಗಿ ಉಳ್ಳ ಆಂತರಿಕ ಜೀವನವು ವಿದ್ಯಾರ್ಜನೆಗೆ ಮತ್ತು ಪ್ರೌಢಾವಸ್ಥೆಗೆ ಕಾಲಿಡಲು ಸಹಾಯ ಮಾಡುತ್ತದೆ. ಗೃಹಸ್ಥಾಶ್ರಮಕ್ಕೆ ಕಾಲಿಡಲು ಬೇಕಾದ ಶಕ್ತಿ, ಸ್ಥೈರ್ಯ, ದಯೆ, ಆತ್ಮತ್ಯಾಗ, ಕುಟುಂಬ-ಸಮಾಜ-ರಾಷ್ಟ್ರರಕ್ಷಣೆ ಮುಂತಾದ ಮಹಾಗುಣವನ್ನು ಬೆಳಸಿಕೊಳ್ಳಲು ಬೇಕಾದ ಬಹು ಕಟ್ಟುಪಾಡಿನ ಜೀವನವದು. ಬ್ರಹ್ಮಚರ್ಯವು ಯೌವ್ವನದ ಮೇರು ಅವಸ್ಥೆಯಲ್ಲಿಯೇ ಶರೀರ, ಬುದ್ಧಿ, ಮನಸ್ಸಿನ ಶಕ್ತಿಗಳನ್ನು ಕ್ರೋಢೀಕರಿಸಿದ ಬಲಿಷ್ಠವಾದ ವ್ಯಕ್ತಿಗಳನ್ನು, ಸಮಾಜದಲ್ಲಿ ಯೋಗ್ಯ ಘಟಕಗಳನ್ನಾಗಿ ಮಾಡುವ ಬಹು ಉಪಯೋಗತರವಾದ ಲೌಕಿಕ ಮತ್ತು ಪಾರಮಾರ್ಥಿಕ ಉದ್ದೇಶಗಳೆರಡನ್ನು ಸಾಧಿಸಲು ಮಾಡಿರುವ ವ್ಯವಸ್ಥೆ.

### ಗಾರ್ಹಸ್ಥ್ಯ ಮೌಲ್ಯ

ವೈವಾಹಿಕ ಮೌಲ್ಯ: '**ಗೃಹಿಣೀ ಗೃಹಮುಚ್ಯತೇ**', '**ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ**' ಹಿಂದೂ ಧರ್ಮದಲ್ಲಿ ಪತ್ನಿಯನ್ನು 'ಸಹಧರ್ಮಿಣಿ' ಎಂದು ಕರೆದರು. ವಿವಾಹವು ಕೇವಲ ದೈಹಿಕ ಸುಖ, ವಂಶಾಭಿವೃದ್ಧಿಗಲ್ಲದೆ ಪಾರಮಾರ್ಥಿಕತೆಗೊಯ್ಯುವ ತುರೀಯಾಶ್ರಮಕ್ಕೆ ಮೆಟ್ಟಿಲು. ಪತಿ-ಪತ್ನಿಯರು ದೈವಾಂಶರಾಗಿ ಶಿವ-ಶಿವೆ, ರಮಾ-ರಮೇಶರೆಂದೇ ತಿಳಿದು ಆ ರೀತಿಯ ಆಚರಣೆಯನ್ನು ಪಾಲಿಸಬೇಕೆಂಬುದೇ ಉದ್ದೇಶ. ಪವಿತ್ರವಾದ ಸಂಕಲ್ಪದಲ್ಲಿ '**ಧರ್ಮೇ ಚ, ಅರ್ಥೇ ಚ, ಕಾಮೇ ಚ ನಾತಿ ಚರಾಮಿ**' ಎಂಬ ಪ್ರತಿಜ್ಞೆಯನ್ನು ಮಾಡಿಕೊಂಡೇ ನಡೆಯುತ್ತಾನೆ. ವಿವಾಹವೆಂಬ ಸಂಸ್ಕಾರ ಭಾರತೀಯ ಸಂಸ್ಕೃತಿಯಲ್ಲಿ ಕೇವಲ ಸ್ವಸುಖಕ್ಕಲ್ಲದೇ, ಧರ್ಮಾರ್ಥ ಕಾಮಮೋಕ್ಷಗಳಿಗಾಗಿ ಬ್ರಹ್ಮಚರ್ಯಾಶ್ರಮದಿಂದ ಇನ್ನೊಂದು ಕಷ್ಟಕರವಾದ ಆಶ್ರಮವಾದ ಗೃಹಸ್ಥಾಶ್ರಮಕ್ಕೆ ಸಿಗುವ ಬಡ್ತಿ ಅಷ್ಟೆ. ಕುಟುಂಬವು ದೊಡ್ಡದಾದ ನಂತರ ಹೇಗೆ ನಡೆಯ ಬೇಕೆಂದು ತಿಳಿಸುತ್ತಾರೆ.

**ಅನುವ್ರತಃ ಪಿತುಃ ಪುತ್ರೋ, ಮಾತ್ರಾ ಭವತು ಸಂಮನಾಃ।**
**ಜಾಯಾ ಪತ್ಯೇ ಮಧುಮತೀಂ ವಾಚಂ ವದತು ಶಂತಿವಾಮ್॥**

**ಮಾ ಭ್ರಾತಾ ಭ್ರಾತರಂ ದ್ವಿಕ್ಷನ್ ಮಾ ಸ್ವಸಾರಮುತ ಸ್ವಸಾ।**
**ಸಮ್ಯಂಚ ಸವ್ರತಾ ಭೂತ್ವಾ ವಾಚಂ ವದತ ಭದ್ರಯಾ॥**

*(ಅಥರ್ವ, ೩-೩೦-೨,೩)*

'ಮಗನು ತಂದೆಗೆ ವಿಧೇಯನಾಗಿ, ತಾಯಿಯ ಮನವೊಪ್ಪುವಂತೆ ನಡೆಯಲಿ. ಹೆಂಡತಿಯು ಗಂಡನಿಗೆ ಸಿಹಿಯಾದ, ಹಿತವಾದ ಮಾತುಗಳನ್ನಾಡಲಿ. ಸಹೋದರನು, ಸಹೋದರರನ್ನು, ಸಹೋದರಿಯು ಸಹೋದರಿಯರನ್ನು ದ್ವೇಷಿಸದಿರಲಿ. ಸಮನಸ್ಕರಾಗಿ, ಒಂದು ಕಾರ್ಯದಲ್ಲೆಲ್ಲರೂ ಒಂದಾಗಿ, ಹಿತವಾದ ಸಂಭಾಷಣೆಯಲ್ಲಿರಲಿ'.

ಸ್ವಾಮಿ ವಿವೇಕಾನಂದರು ತಮ್ಮ 'ಕರ್ಮಯೋಗ'ದಲ್ಲಿನ 'ಪ್ರಯೊಬ್ಬರೂ ಅವರವರ ಸ್ಥಾನದಲ್ಲಿ ದೊಡ್ಡವರು' ಎಂಬ ಉಪನ್ಯಾಸದಲ್ಲಿ ಒಬ್ಬ ಗೃಹಸ್ಥನ ಆದರ್ಶದ ಅಸಾಧಾರಣತೆ, ಕಠಿಣತೆ ಮತ್ತು ಶ್ರೇಷ್ಠತೆಗಳನ್ನು ಅತ್ಯಂತ ಮನೋಜ್ಞವಾಗಿ ಬಣ್ಣಿಸಿದ್ದಾರೆ. ಗೃಹಸ್ಥನು ಸಮಾಜಚಕ್ರದ ನಾಭಿಯಂತೆ. ಅವನ ಸತ್ಯ ಪ್ರಾಮಾಣಿಕತೆ ದಾನ, ಧರ್ಮ ಮುಂತಾದ ಆದರ್ಶ ಆ ನಾಗರಿಕತೆಯ ಮೌಲ್ಯಮಾಪಕಗಳು. ಅವನ ಶೌರ್ಯ, ವೀರ್ಯದಿಂದ ರಾಷ್ಟ್ರದ ಸೀಮೆ, ಪಶು, ಸಂಪತ್ತು, ಸ್ತ್ರೀ ಮುಂತಾದುದರ ರಕ್ಷಣೆಯಾಗುತ್ತದೆ. ಅವನ ಧನ ಸಂಪಾದನೆ, ಮೇಲೆಯೇ ಸಮಾಜದ ಆಬಾಲವೃದ್ಧರೂ, ಸಂನ್ಯಾಸಿಗಳೂ ಅವಲಂಬಿಸಿದ್ದಾರೆ. ಇಂತಹ ಆದರ್ಶಮಯ ಗೃಹಸ್ಥನ ಜೀವನ ಎಲ್ಲ ಆಶ್ರಮಗಳಿಗೂ ಶ್ರೇಷ್ಠವಾದ್ದಾಗಿರುತ್ತದೆ. ಧರ್ಮಮಾರ್ಗವನ್ನು ಗೆರೆಯಷ್ಟೂ ಬಿಡದೆ, ಆಜೀವನ ಪರರಿಗಾಗಿ ದುಡಿದು ಎಲ್ಲರ ರಕ್ಷಣೆ, ಪೋಷಣೆಯ ಜವಾಬ್ದಾರಿಯನ್ನು ಹೊತ್ತ ನರನು ಹರ್ಕ್ಯುಲಿಸ್‌ನಂತೆ ಹೆಗಲ ಮೇಲೆ ಸಂರಕ್ಷಣೆಯ ಭಾರವನ್ನು ಹೊತ್ತು , ಭುವಿಯಲ್ಲಿ ನಾರಾಯಣನಂತೆ ಸಂಚರಿಸುತ್ತಾನೆ.

**ಗೃಹಸ್ಥರಿಗೆ ಸಂಘ ಜೀವನದ ಮೌಲ್ಯ:** ಪ್ರತಿಯೊಬ್ಬರೂ ಉದ್ಧಾರವಾಗಬೇಕಾದರೆ ಸಮಾಜದಲ್ಲಿ ಕೂಡಿ ಬಾಳಿ ಎಲ್ಲರೂ ಒಟ್ಟಾಗಿ ನಡೆಯಬೇಕಾದ ಆವಶ್ಯಕತೆಯನ್ನು ಗ್ರೂಪ್ ಎನರ್ಜಿ, ಟೀಂ ವರ್ಕ್ ಎಂದು ನಾವಿಂದು ಏನನ್ನು ಹೇಳುತ್ತೇವೆಯೋ ಅದನ್ನು **ಸಂಗಚ್ಛಧ್ವಂ, ಸಂ ವದಧ್ವಂ...** *(ಋಗ್ವೇದ, ೧೦. ೧೯೨. ೨)* ಮುಂತಾದ ಸುಮನೋಹರ ಮಂತ್ರಗಳಿಂದ ವೇದಗಳು ಒತ್ತಿ ಹೇಳುತ್ತವೆ. **ಕೃಣ್ವಂತೋ ವಿಶ್ವಮಾರ್ಯಂ** *(ಋಗ್ವೇದ, ೯.೬೩.೫)* 'ಇಡೀ ವಿಶ್ವವನ್ನು (ಜನರನ್ನು) ಆರ್ಯರನ್ನಾಗಿ (ಸಜ್ಜನರನ್ನಾಗಿ) ಮಾಡೋಣ.'

### ರಾಮಾಯಣ

ಮಾನವ ಜನ್ಮದ, ಮಾನವ ಪ್ರಜ್ಞೆಯ, ಮಾನವೀಯತೆಗಳ ಘನತೆ ಗಾಂಭೀರ್ಯದ ಕಲ್ಪನೆಯ ಮೇರು ಪರಿಮಿತಿಯ ಪರಿಚಯವನ್ನು ಮಾಡಿಕೊಟ್ಟಿರುವ ಮಹಾಕಾವ್ಯವೇ ರಾಮಾಯಣ. ಒಬ್ಬ ವ್ಯಕ್ತಿಗೆ ಅತ್ಯಂತ ಮುಖ್ಯವಾದ ಮೌಲ್ಯವೆಂದರೆ ಮರ್ಯಾದೆ. ನಾವು ಕನ್ನಡದಲ್ಲಿ ಹೇಳುವ ಮರ್ಯಾದೆಯಲ್ಲ. ಧರ್ಮವು ಹಾಕಿದ ಗೆರೆಯನ್ನು ಮೀರದೆ ನಡೆಯುವುದಕ್ಕೆ ಮರ್ಯಾದೆ ಎನ್ನುತ್ತಾರೆ. ಶ್ರೀರಾಮನು ಮರ್ಯಾದಾ ಪುರುಷೋತ್ತಮನೆಂದು ಕರೆಸಿಕೊಂಡನು. ಮೌಲ್ಯಗಳನ್ನು ಪರಿಪೂರ್ಣತೆವಾಗಿ



ಆಚರಿಸಿ ತೋರಿಸಿ ತನ್ನೆಲ್ಲ ಸಾಂಗೋಪಾಂಗಿಗಳೂ ಹಾಗೆಯೇ ಅನುಸರಿಸುವಂತೆ ಪ್ರೇರೇಪಿಸಿ, ಭಾರತೀಯತೆಯ ಮೌಲ್ಯವನ್ನು ಎತ್ತಿಹಿಡಿದು, ಆ ಮಾರ್ಗದಲ್ಲಿ ವ್ಯಕ್ತಿ, ಸಮಾಜ, ಮತ್ತು ಕುಟುಂಬದ ಎಲ್ಲರೂ ನಡೆಯಲು ಆದರ್ಶಪ್ರಾಯವಾದ ಪಾತ್ರಗಳನ್ನು ನೀಡಿರುವುದನ್ನು ಕಾಣುತ್ತೇವೆ. ತ್ಯಾಗ, ಪ್ರೇಮ, ಸೋದರ ಭಾವ, ದಾಸತ್ವ, ಸಮರ್ಪಣೆ, ದುಷ್ಟದಮನ, ಶಿಷ್ಟರಕ್ಷಣೆ ಹೀಗೆ ಅನೇಕ ಗುಣಗಳ ಪ್ರತೀಕದಂತೆ ಪ್ರತಿಯೊಬ್ಬರ ಬಾಳಿಗೂ ಬೇಕಾದ ಆದರ್ಶ ಜೀವನಕ್ಕೆ ಅತ್ಯುನ್ನತವಾದ ಮಾರ್ಗದರ್ಶನದ ಕೈಪಿಡಿಯು ರಾಮಾಯಣದಲ್ಲಿ ನಮಗೆ ದೊರೆತಿದೆ.

### ಮಹಾಭಾರತ

**'ವಾಸುದೇವಸ್ಯ ಮಾಹಾತ್ಮ್ಯಂ'** ಎಂದೆಣಿಸುವ ಮಹಾಭಾರತವು, ಯೋಗೇಶ್ವರ ಶ್ರೀಕೃಷ್ಣನ ಸುತ್ತಲೂ ನಡೆದ ಒಂದು ಇತಿಹಾಸ. ಶ್ರೀಕೃಷ್ಣನು ಅವತಾರವೆಂದು ಸಾರಿ ವ್ಯಾಸರು, ಬೆರಳೆಣಿಕೆಯ ಸಜ್ಜನರು ಕಷ್ಟಕೋಟಲೆಗಳನ್ನೆದುರಿಸಿ ಹೇಗೆ ನಡೆದು ನುಡಿದು ಹೋದರೆಂದು ಇಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ. ಶ್ರೀಕೃಷ್ಣನು ಕೇವಲ ವೈಯುಕ್ತಿಕ ಮೌಲ್ಯಗಳನ್ನಷ್ಟೇ ಅಲ್ಲದೆ, ಜಗತ್ತಿನ ಹಿತಕ್ಕಾಗಿ ಸಾಮಾಜಿಕ, ರಾಜಕೀಯ ಮೌಲ್ಯಗಳ ಅನುಷ್ಠಾನಕ್ಕೆ ಬೇಕಾಗುವ ಧೈರ್ಯ, ಮುತ್ಸದ್ದಿತನ, ಚಾಣಾಕ್ಷತನ, ಸಮಯ ಸಾಧನೆ ಮುಂತಾದ ನಾಯಕತ್ವದ ಮೌಲ್ಯಗಳನ್ನು ಎತ್ತಿಹಿಡಿದನು. ಇವುಗಳನ್ನು ಅರ್ಥ ಮಾಡಿಕೊಳ್ಳಲು ಆಳವಾದ ಪ್ರಜ್ಞೆ ಮತ್ತು ವಿಶ್ವಧರ್ಮದ ತಳಹದಿಯ ಜ್ಞಾನವಿರಬೇಕು. **'ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ'** ಎಂಬ ಆದರ್ಶವನ್ನು ಸಜ್ಜನರಾದ ಐದು ಬೆರಳು ಮಡಿಚಿದರಾಗುವ ಮುಷ್ಟಿಗಾತ್ರದ ಪಂಚಪಾಂಡವರಿಂದಲೇ ಮಾಡಿಸಿದನು. ಶಿಷ್ಟ

ರಕ್ಷಣೆ, ಧರ್ಮರಕ್ಷಣೆ, ರಾಷ್ಟ್ರರಕ್ಷಣೆಗೆ ಆವಶ್ಯಕವಾಗುವ ಕಪಟ, ಅರೆ ಸತ್ಯ ಮುಂತಾದವನ್ನು ಕೂಡ, ದುಷ್ಟರ ವಧೆಗೆ ಬಳಸಿದಲ್ಲಿ ಹಿಂಸಾಕರ್ಮವೂ ಧಾರ್ಮಿಕವಾಗುವುದೆಂಬುದು, ಮಹಾಭಾರತದ ಸಂದೇಶ. ವಿದುರ, ಭೀಷ್ಮ ದ್ರೋಣಾದಿಗಳು ಉನ್ನತ ವ್ಯಕ್ತಿಗಳೂ, ದೈವಾಂಶ ಸಂಭೂತರಾಗಿ ದ್ದರೂ ಸ್ತ್ರೀ ಅಪಮಾನ ಮುಂತಾದ ಹೀನ ಕಾರ್ಯಗಳ ಮುಂದೆ ಕಣ್ಣಿದ್ದೂ ಕುರುಡರಂತೆ ದ್ವಂದ್ವಕ್ಕೊಳಗಾಗಿ ಬಲಹೀನತೆಯನ್ನು ತೋರಿದರು. ಧರ್ಮಾರ್ಥ ಕಾಮಮೋಕ್ಷಗಳನ್ನು ಜೀವನವೆಂಬ ಕುರುಕ್ಷೇತ್ರದ ನಡುವೆಯೇ ಸಾಧಿಸಬೇಕೆಂಬ ಆದರ್ಶವನ್ನು ಮಹಾಭಾರತವು ವಿವಿಧ ಪಾತ್ರಗಳ ಉದಾಹರಣೆಯ ಮೂಲಕ ನಮಗೆ ಕಣ್ಣಿಗೆ ಕಟ್ಟುವಂತೆ, ಮನ ಮುಟ್ಟುವಂತೆ ನೀಡುತ್ತದೆ.

### ಇತರ ಭಾರತೀಯ ಧರ್ಮಗಳಲ್ಲಿ

ಬೌದ್ಧಧರ್ಮ: ಕ್ಷಣಕ್ಷಣಕ್ಕೂ ಮಾರ್ಪಾಟಾಗುತ್ತಿರುವ ಪ್ರಪಂಚದಿಂದ ಪಾರಾಗಲು, ಇಂದ್ರಿಯ ತೃಷ್ಣಾ ಕಾಮನೆಗಳಿಂದ ದೇಹ



ಮತ್ತು ಆತ್ಮಕ್ಕೆ ಕ್ಲೇಶವನ್ನುಂಟುಮಾಡುವ ದುಃಖದಿಂದ ತಪ್ಪಿಸಲು ಮೂರು ಗುಂಪುಗಳ ಅಷ್ಟಾಂಗ ಮಾರ್ಗವೆಂಬ ಮೌಲ್ಯಗಳನ್ನು ಬುದ್ಧನು ನೀಡುತ್ತಾನೆ:

ಸಮ್ಯಕ್‌ದೃಷ್ಟಿ, ಸಮ್ಯಕ್ ಸಂಕಲ್ಪ (ಪ್ರಜ್ಞೆ), ಸಮ್ಯಕ್ ವಾಕ್,
ಸಮ್ಯಕ್ ಕರ್ಮಾಂತ, ಸಮ್ಯಕ್ ಆಜೀವ (ಶೀಲ),
ಸಮ್ಯಕ್‌ವ್ಯಾಯಾಮ,
ಸಮ್ಯಕ್‌ಸ್ಮೃತಿ, ಸಮ್ಯಕ್‌ಸಮಾಧಿ (ಸಮಾಧಿ). ಇದರ ಅನುಸರಣೆಯಿಂದ ಮನುಷ್ಯನು ವಾಸನಾರಹಿತನಾಗಿ ಮೌಲ್ಯಯುತ ಸದ್ವ್ಯಕ್ತಿಯಾಗಿ ಮುಂದೆ ನಿರ್ವಾಣಕ್ಕೂ ಅರ್ಹನಾಗುತ್ತಾನೆ. ಬುದ್ಧನ ಅನುಭವದ ಆಳದಿಂದ ಹೊರಹೊಮ್ಮಿದ ಧರ್ಮ, ಬೋಧಿ ಧರ್ಮ. ಬುದ್ಧನು ಶೀಲಕ್ಕೆ ಪ್ರಾಧಾನ್ಯತೆಯನ್ನು ನೀಡುತ್ತಾನೆ. ಅವನ ಬಳಿ ಬಂದವರೆಲ್ಲರೂ ಲೋಕ ಕಾರುಣ್ಯ, ಪ್ರೀತಿ, ಪ್ರಾಣಿ ದಯೆ, ಸ್ವಾರ್ಥತ್ಯಾಗ, ಸೇವೆ, ಶುಶ್ರೂಷೆ ಮುಂತಾದ ಸದ್ಗುಣಗಳನ್ನು ಪಡೆದರು.

ಜೈನಧರ್ಮ: ಮಹಾವೀರ ಜಿನನು ಎಲ್ಲರೂ ಅನುಸರಿಸಬಹುದಾದ ೧೨ ನಿಯಮಗಳನ್ನು ತಿಳಿಸುತ್ತಾನೆ : ೧) ಸಂಪೂರ್ಣ ಅಹಿಂಸಾಚರಣೆ ಮಾಡಬೇಕು. ೨) ಸುಳ್ಳನ್ನು ಹೇಳಬಾರದು. ೩) ಕದಿಯಬಾರದು. ೪) ದುಶ್ಶೀಲನಾಗಬಾರದು. ೫) ಅಪರಿಗ್ರಹದಿಂದ, ಲೌಕಿಕ ಆಸೆಗೆ ಕಡಿವಾಣ. ೬) ಪಾಪ ಪ್ರಲೋಭನೆಯಿಂದ ದೂರವಿರಬೇಕು. ೭) ಇತಿಮಿತಿಯ ಜೀವನ ನಡೆಸಬೇಕು. ೮) ಕೆಟ್ಟ ವಸ್ತುಗಳಿಂದ ದೂರವಿರಬೇಕು. ೯) ನಿತ್ಯ ಧ್ಯಾನ ಮಾಡಬೇಕು. ೧೦) ಉಪವಾಸಾದಿ ಆತ್ಮಸಂಯಮಗಳನ್ನು ಆಚರಿಸಬೇಕು. ೧೧) ಆಗಾಗ ಸಂನ್ಯಾಸಿಯಂತೆ ಕಾಲ ಕಳೆಯಬೇಕು. ೧೨) ತಪಸ್ವಿಗಳಿಗೆ ಭಿಕ್ಷೆ ನೀಡಬೇಕು.

ಭಾರತೀಯ ಚಿಂತನೆಗೆ ನೈಸರ್ಗಿಕ ಹಾಗೂ ಭೌಗೋಳಿಕ ಲಕ್ಷಣಗಳು ಬಹಳ ಪ್ರಭಾವ ಬೀರಿವೆ. ಅಗಣಿತ ಕಾನನಗಳು, ನದಿ ಜಲಪಾತಗಳು, ಉತ್ತರದ ಹಿಮಾಲಯ, ನಡುವೆ ವಿಂಧ್ಯ ಪರ್ವತ, ದಕ್ಷಿಣದ ಸಹ್ಯಾದ್ರಿ ಮುಂತಾದ ಪರ್ವತ ಶ್ರೇಣಿಗಳು ಸತ್ಯಾನ್ವೇಷಣೆಗಾಗಿ ಅಂತರ್ಯವನ್ನು ಹೊಕ್ಕು ಪರಿಹಾರವನ್ನು ಪಡೆಯುವುದಕ್ಕೆ ಪ್ರೇರೇಪಿಸಿವೆ. ಇವುಗಳು ಸೃಷ್ಟಿಕರ್ತ, ಸರ್ವಾಂತರ್ಯಾಮಿಗೆ ಸಾಕಾರ ರೂಪವನ್ನು ನೀಡಲೂ ಪುಷ್ಟಿ ನೀಡಿವೆ. ಸ್ವಾಮೀಜಿ ಮದ್ರಾಸಿನಲ್ಲಿ ಭಟ್ಟಾಚಾರ್ಯರೆಂಬುವರ ಮನೆಯಲ್ಲಿದ್ದಾಗ ಆಗಂತುಕರೊಬ್ಬರು ''ಸ್ವಾಮೀಜಿ, ಅತ್ಯುಚ್ಚವಾದ ವೇದಾಂತ ಚಿಂತನೆಯಿದ್ದರೂ ಸಹ ಮೂರ್ತಿಪೂಜೆಗೇಕೆ ಹಿಂದೂಗಳು ಕಟ್ಟುಬಿದ್ದಿದ್ದಾರೆ?'' ಎಂದು ಕೇಳಿದಾಗ ತಕ್ಷಣ ಸ್ವಾಮೀಜಿ, ''ನಮ್ಮಲ್ಲಿ ಹಿಮಾಲಯವಿದೆ!'' ಎಂದು ಉದ್ಗರಿಸುತ್ತಾರೆ. ಎಲ್ಲ ಮೂರ್ತಾಮೂರ್ತ ವಸ್ತುಗಳಲ್ಲಿಯೂ ಆ ನಿರಾಕಾರ ಶಕ್ತಿಯನ್ನು ಕಾಣುವ ವೈಶಿಷ್ಟ್ಯತೆಯು ಸಂಸ್ಕೃತಿಯ ಆದರ್ಶ, ಮೌಲ್ಯಗಳು, ಕರ್ಮ, ಉಪಾಸನೆ, ತ್ಯಾಗ ಮತ್ತು ಸೇವೆಯ ಮೇಲೆ ಪ್ರಭಾವ ಬೀರಿದೆ. ಸರ್ವಜನರ ಸುಖ ಸಮೃದ್ಧಿ, ಮಾನವೀಯತೆ, ಹಾಗೂ ಪಾರಮಾರ್ಥಿಕ ಪ್ರಾಪ್ತಿ ಇವು ನಮ್ಮ ಉಸಿರಾಗಿದೆ. ಹೀಗಾಗಿ ಎಲ್ಲ ಸಂಸ್ಕೃತಿಗಳಿಗೂ ತಮ್ಮ ಉದ್ದೇಶ ಸಾಧನೆಗೆ ಜೀವನ ಮೌಲ್ಯವೇ ಮಾಧ್ಯಮ. ಉಳಿದ ಶಾಸ್ತ್ರ, ಆಚಾರ ಮುಂತಾದವುಗಳೆಲ್ಲ ಗೌಣ. ಭಾರತೀಯ ಸಂಸ್ಕೃತಿಯ ಮೂಲಸ್ರೋತವಾದ ವೇದವು ಮಾನವವಿಕಾಸದ ವಿವಿಧ ಸ್ತರಗಳಲ್ಲಿ ಅನುಸರಿಸಬೇಕಾದ ಮೌಲ್ಯಗಳನ್ನು ನೀಡುತ್ತದೆ. ಎಲ್ಲ ಮಾನವರ, ಎಲ್ಲ ಆಲೋಚನೆಗಳ, ಎಲ್ಲ ಅನುಭವಗಳೂ ಒಂದೆಡೆ ಐಕ್ಯವಾಗುವುದೆಂದು ಸಾರುವುದರಲ್ಲಿದೆ ನಮ್ಮ ಸಂಸ್ಕೃತಿಯ ಶಕ್ತಿ. ವಿದೇಶೀ ಆಕ್ರಮಣದ ಆಘಾತಗಳ ನಡುವೆಯೂ ಅಳಿಯದೇ ಉಳಿದುದಕ್ಕೆ ಕಾರಣ ಮೌಲ್ಯಗಳನ್ನು ಬಿಡದೆ ಪಾಲಿಸಿದ ಜನಾಂಗ. ಈ ಸಹನಾ ಶಕ್ತಿಯಿಂದ ಸದೃಢ ವಾಗಿರುವುದರಿಂದ ಈ ಮಹಾವೃಕ್ಷವು ಇಂದು ನಡೆಯುತ್ತಿರುವ ಆಧುನಿಕತೆಯ ಕುಠಾರ ಪ್ರಹಾರದ ನಡುವೆಯೂ ಹಸಿರಾಗಿದೆ. ಭಾರತೀಯತೆಯ ಉನ್ನತ ಆದರ್ಶ ಪ್ರತಿಯೊಬ್ಬನಲ್ಲಿಯೂ ಇರುವ ದಿವ್ಯತೆಯನ್ನು ಪ್ರಕಟಿಸಲೋಸುಗ ಮಾನವನು ಜೀವಿಸ ಬೇಕು ಎನ್ನುವುದು. ಇದರ ಜೊತೆ ಜೊತೆಗೆ ಹೊಂದಿಸಿಕೊಂಡು ಹೋಗುವ ಧರ್ಮಾರ್ಥ ಕಾಮವೂ ಕೊನೆಗೆ ಆ ಮೋಕ್ಷಕ್ಕೇ ಎಡೆ ಮಾಡಿಕೊಡುತ್ತದೆ ಎಂಬುದು ಮುಖ್ಯವಾದ ವಿಷಯ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ನಮಗೆ ತಿಳಿದಂತೆ ಜ್ಞಾನದಿಂದ ವ್ಯಕ್ತಿಯು ಬೆಳೆಯುತ್ತಾನೆ, ಮೌಲ್ಯಗಳು ವಿಕಾಸವಾಗುತ್ತವೆ, ನಾನು ಬೇರೆಯಲ್ಲವೆಂಬ ಭಾವನೆಯಿಂದ ನಿಸ್ವಾರ್ಥತೆ ಉದಿಸುತ್ತದೆ. ಇದೇ ಎಲ್ಲ ಮೌಲ್ಯಗಳ ಸಾರ ನಿಸ್ವಾರ್ಥ

# ಭಾರತೀಯ ಸಂಸ್ಕೃತಿಯಲ್ಲಿ ಶಿಕ್ಷಣ

ಸ್ವಾಮಿ ಮುಕ್ತಿದಾನಂದ

ಸಂಸ್ಕೃತಿಗೂ ಶಿಕ್ಷಣ ಪದ್ಧತಿಗೂ ನಿಕಟವಾದ ಸಂಬಂಧವಿದೆ. ವಿದ್ಯಾಭ್ಯಾಸ ಪದ್ಧತಿಯಾಗಿ ಶಿಕ್ಷಣ ಹಾಗೂ ಜೀವನದ ವಿವಿಧ ಕ್ಷೇತ್ರಗಳಲ್ಲಿ ಲಭಿಸುವ ಶಿಕ್ಷಣ — ಇವೆರಡೂ ಒಂದು ಸಂಸ್ಕೃತಿಯಲ್ಲಿ ಮುಖ್ಯವಾಗುತ್ತದೆ. ಭಾರತೀಯ ಸಂಸ್ಕೃತಿ ಇದನ್ನು ಬೆಳೆಸಿಕೊಂಡ ಬಂದ ಬಗೆ ಮತ್ತು ಆಧುನಿಕ ಕಾಲದಲ್ಲಿ ಉಂಟಾಗಿರುವ ಪರಿವರ್ತನೆ ಇವುಗಳನ್ನು ಕುರಿತಂತೆ ಚಿಂತಿಸಿರುವ ಪೂಜ್ಯ ಸ್ವಾಮೀಜಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು ಹಾಗೂ 'ವಿವೇಕಪ್ರಭ'ದ ವ್ಯವಸ್ಥಾಪಕ ಸಂಪಾದಕರು. ರಾಮಕೃಷ್ಣ ಮಹಾಸಂಘದ ವಿಶ್ವಸ್ತ ಮಂಡಲಿಯ ಸದಸ್ಯರಾಗಿರುವ ಅವರು ಉತ್ತಮ ಚಿಂತಕರೂ, ಪ್ರವಚನಕಾರರೂ, ಲೇಖಕರೂ ಆಗಿದ್ದಾರೆ.



## ವೈದಿಕ ಯುಗದಲ್ಲಿನ ಸಮಗ್ರ ಶಿಕ್ಷಣ

ಭಾರತೀಯ ಸಂಸ್ಕೃತಿಯ ಬೆಳವಣಿಗೆಯಲ್ಲಿ ವೇದಕಾಲದಿಂದಲೂ ಶಿಕ್ಷಣದ ಪಾತ್ರ ಅತ್ಯಂತ ಪ್ರಮುಖವಾದುದು. ಮೂಲತಃ ಶಿಕ್ಷಣವು ನಮಗೆ ಉತ್ತಮ ಸಂಸ್ಕಾರಗಳನ್ನು ನೀಡಿ ಭವ್ಯವಾದ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲು ನೆರವಾಗುತ್ತದೆ. ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಜಿಜ್ಞಾಸೆ ಮತ್ತು ಅನುಭವಗಳನ್ನೇ ನಿಜವಾದ ಶಿಕ್ಷಣ ಎಂದು ಪರಿಗಣಿಸಲಾಗುತ್ತದೆ. ಜ್ಞಾನಾರ್ಜನೆಯೆಂಬುದು ಒಂದು ನಿರಂತರವಾದ ಸಂಸ್ಕಾರ. ಮಗು ಹುಟ್ಟಿದಾಗ ಅದಕ್ಕೆ ಯಾವ ತಿಳುವಳಿಕೆಯ ಅರಿವೂ ಇರುವುದಿಲ್ಲ; ಆಮೇಲೆ ಅದು ಸುತ್ತಲೂ ಗಮನ ಹರಿಸುತ್ತದೆ; ಬಾಹ್ಯ ಪ್ರಪಂಚದಿಂದ ಮಗುವಿನ ಇಂದ್ರಿಯ ರಚನೆಯೊಳಕ್ಕೆ ಹರಿದುಬರುವ ವಿಧವಿಧ ಪ್ರಭಾವಗಳನ್ನು ಅರಗಿಸಿಕೊಂಡು ತನ್ನ ಅನುಭವದ ಕ್ಷಿತಿಜವನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ. ಅನುಭವದ ಕ್ಷಿತಿಜ ವಿಸ್ತಾರವಾಗುತ್ತಿದ್ದಂತೆ ಬಾಹ್ಯಲೋಕದ ಮೇಲಿನ ಹತೋಟಿಯನ್ನು, ತಿಳುವಳಿಕೆಯನ್ನು ರೂಪಿಸಿಕೊಳ್ಳುತ್ತದೆ. ಶೈಶವಾವಸ್ಥೆಯಲ್ಲಿ ಸ್ವಾಭಾವಿಕವಾಗಿ ನಡೆಯುವ ಈ ಶಿಕ್ಷಣದ ಪ್ರಕ್ರಿಯೆ ಮುಂದೆ ಬಾಲ್ಯಾವಸ್ಥೆಯಲ್ಲಿ ಹೆಚ್ಚು ಸ್ಫುಟವಾಗಿಯೂ, ಉದ್ದೇಶಪೂರ್ವಕವಾಗಿಯೂ ಇರುತ್ತದೆ. ಉದಾಹರಣೆಗೆ ವೇದಕಾಲದಲ್ಲಿನ ಶಿಕ್ಷಣಕ್ರಮದಲ್ಲಿ ಋಷಿಮುನಿಗಳ ವಾಸ್ತವ್ಯದಲ್ಲಿಯೇ ಭಾರತೀಯ ಸಂಸ್ಕೃತಿಯ ತಿರುಳನ್ನು ಸಾರುವ ವೇದಗಳ ಅಧ್ಯಯನದಲ್ಲಿ ಹಾಗೂ ಮಾನಸಿಕ ಶಕ್ತಿವರ್ಧಕ ಬುದ್ಧಿಯ ವಿಕಾಸಕ್ಕೆ ತರಬೇತಿ ನೀಡುವ ಅನು

ಷ್ಠಾನಗಳೊಡನೆ ಶಿಕ್ಷಣವು ಕ್ರಮಬದ್ಧವಾಗಿ ಸಾಗುತ್ತಿತ್ತು. ವೇದಾಧ್ಯಯನವು ಶಿಕ್ಷಣದ ಅವಿಭಾಜ್ಯ ಪ್ರಧಾನ ಅಂಗವಾಗಿದ್ದರೂ ಜೊತೆಜೊತೆಗೇ ಜೀವನೋತ್ಸಾಹಕ್ಕೆ ಬೇಕಾದ ವ್ಯವಹಾರಜ್ಞಾನವನ್ನು ಶಿಕ್ಷಣದಲ್ಲಿ ಅಳವಡಿಸಿಕೊಳ್ಳಲಾಗಿತ್ತು. ನಿಜಜೀವನದ ಸವಾಲುಗಳನ್ನು ಎದುರಿಸುವುದರೊಂದಿಗೆ ಸತ್ಯಶೋಧನೆ ಲೋಕಸೇವೆಯನ್ನು ಮೇಳೈಸಿಕೊಂಡಿರುವುದನ್ನು ವೇದಕಾಲದ ಶಿಕ್ಷಣಕ್ರಮದಲ್ಲಿ ನಾವು ಕಾಣಬಹುದು.

ಭಾರತೀಯ ಸಂಸ್ಕೃತಿಯಲ್ಲಿ ಮೊದಲಿನಿಂದಲೂ ಭೌತಿಕ ವಿಜ್ಞಾನಗಳಿಗೆ ಪ್ರಾಶಸ್ತ್ಯವನ್ನು ನೀಡಲಾಗಿತ್ತು. ಹಲವು ಭೌತಿಕ ವಿಜ್ಞಾನಗಳನ್ನು ಬೆಳೆಸಿ ಹಲವು ಮೂಲಭೂತ ವೈಜ್ಞಾನಿಕ ಪರಿಕಲ್ಪನೆಗಳನ್ನು, ಪರಿಭಾಷೆಗಳನ್ನು ರೂಪಿಸುವುದರ ಮೂಲಕ ಮಾನವನ ವೈಜ್ಞಾನಿಕ ತಿಳಿವಳಿಕೆ ಹೆಚ್ಚಲು ನೆರವಾಗಿರುವುದನ್ನು ನಾವು ಕಾಣುತ್ತೇವೆ. ವೇದಾಧ್ಯಯನದ ಜೊತೆಗೆ ಸಂಸ್ಕೃತಿ, ಭಾಷಾವಿಜ್ಞಾನ, ಸಂಗೀತ, ಆಯುರ್ವೇದ, ಪಾಕಶಾಸ್ತ್ರ, ಅಸ್ತ್ರವಿದ್ಯೆ ಮುಂತಾದ ಇತರ ಪ್ರಕಾರಗಳಲ್ಲಿಯೂ ಉಪಯುಕ್ತವಾಗಿರುವ, ವಿವಿಧ ರೀತಿಯ ಜ್ಞಾನ ಮತ್ತು ಕಲೆಯನ್ನು ಶಿಕ್ಷಣದ ಮೂಲಕ ಕಲಿಸಲಾಗುತ್ತಿತ್ತು. ಇದರ ಜೊತೆಯಲ್ಲೇ ಮಾನವನ ವ್ಯಕ್ತಿತ್ವ, ಅವನ ಆಂತರಿಕ ಬೆಳವಣಿಗೆ, ಸಾಫಲ್ಯ ಇವುಗಳ ಮೇಲೆ ಭಾರತೀಯ ಚಿಂತನಶಕ್ತಿಯೆಲ್ಲ ಕೇಂದ್ರೀಕೃತವಾಯಿತು. ಇದನ್ನು ನಾವು ಸಮಗ್ರ ಶಿಕ್ಷಣ (Integral education) ಎನ್ನಬಹುದು. ಇದು ಮನುಷ್ಯನ ವ್ಯಕ್ತಿತ್ವದ ಎಲ್ಲಾ ಆಯಾಮಗಳ ಬೆಳವಣಿಗೆಗೆ ಅಂದರೆ ದೇಹ ಮನಸ್ಸು, ಆಂತರಿಕ ದೈವತ್ವದ ಅರಿವು ಮತ್ತು ಸಂಸಾರ ನಿರ್ವಹಣೆಯನ್ನು ಧರ್ಮದ ಆಧಾರದಲ್ಲಿ ಸಾಧಿಸುವ ಪರಿಪೂರ್ಣ ಸಮಗ್ರ, ಶಿಕ್ಷಣವಾಗಿತ್ತು.

### ಪರಾವಿದ್ಯಾ ಮತ್ತು ಅಪರಾವಿದ್ಯಾ

ಅಂದಿನ ಕಾಲದ ಶಿಕ್ಷಣ ಪದ್ಧತಿಯು ಇಂದಿನಂತೆ ಸಂಸ್ಕೃತಿವಿಹೀನವಾಗಿರಲಿಲ್ಲ. ಈಗಿನ ಧಾರ್ಮಿಕ ಮತ್ತು ಧರ್ಮನಿರಪೇಕ್ಷಕ ಎಂಬ ವಿಭಜನೆಯು, ಉಪನಿಷತ್ತುಗಳ ಮತ್ತು ಪ್ರಧಾನ ಸಂಪ್ರದಾಯದ ಆಧಾರವಿಲ್ಲದೆ ಹೊಸದಾಗಿ ಉದ್ಭವಿಸಿದ, ಸರಿಯಾದ ಅರ್ಥವನ್ನು ಕಂಡುಕೊಂಡು ಅಳವಡಿಸಲಾಗದೆ ಇರುವ ಒಂದು ವಿಕೃತವಾದ ಮೂಢನಂಬಿಕೆಯ ಪರಿಣಾಮವಾಗಿದೆ. ಪ್ರಾಚೀನ ಭಾರತವು ಭೌತಿಕವಿಜ್ಞಾನ ಮತ್ತು ಆಧ್ಯಾತ್ಮಿಕ ವಿಜ್ಞಾನಗಳ ನಡುವೆ ಭೇದವಿಲ್ಲದ ಒಂದು ಸಮಗ್ರ ಶಿಕ್ಷಣ ಪದ್ಧತಿಯನ್ನು ರೂಪಿಸಿತ್ತು. ಭಾರತೀಯರ ಸರ್ವಮಾನ್ಯ ಸಂಪ್ರದಾಯದ ಪ್ರಕಾರ, ಎಲ್ಲ ಶಾಸ್ತ್ರ (ವಿದ್ಯೆ) ಅಥವಾ ಜ್ಞಾನದ ಅಧಿದೇವತೆ ಸರಸ್ವತಿ; ಲೌಕಿಕ ವಿದ್ಯೆ ಹಾಗೂ ಪಾರಮಾರ್ಥಿಕ ವಿದ್ಯೆಗಳೆರಡೂ ಅವಳ ಆಧಿಪತ್ಯಕ್ಕೆ ಸೇರಿದವು. ಎಲ್ಲಾ ಭೌತಿಕ ವಿಜ್ಞಾನಗಳು, ತಾಂತ್ರಿಕ ವೃತ್ತಿಗಳೂ, ವೈದ್ಯಕೀಯ, ಇಂಜಿನಿಯರಿಂಗ್ ಹಾಗು ಕಲೆಗಳು, ಕರಕುಶಲ ವಿದ್ಯೆಗಳು (ಅಪರಾವಿದ್ಯಾ) ಹಾಗೂ ಉನ್ನತ ಆಧ್ಯಾತ್ಮಿಕ ಜ್ಞಾನ (ಪರಾವಿದ್ಯಾ) ಎಲ್ಲವೂ ಅವಳ ಅಧೀನಕ್ಕೆ ಸೇರಿದವು. ಮಾನವ ಶಿಕ್ಷಣದ ಕೇಂದ್ರವಾಗಿ ಆತ್ಮವಿಚಾರವೇ ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಪ್ರಧಾನವಾಗಿತ್ತು; ಮಾನವನ ಭೌತಿಕ, ಮಾನಸಿಕ, ಆಧ್ಯಾತ್ಮಿಕ ಆಯಾಮಗಳ ಸರ್ವಾಂಗೀಣ ವಿಕಾಸದ ಮೇಲೆ ಈ ಶಿಕ್ಷಣ ಒತ್ತನ್ನು ನೀಡುತ್ತಿತ್ತು. ಅಂದಿನ ಶಿಕ್ಷಣವು ವಿದ್ಯಾರ್ಥಿಯ ಪ್ರಶ್ನಿಸುವ ಮನೋಭಾವವನ್ನು ಬೆಳೆಸಿ, ಅವನು ತನ್ನ ಪ್ರಶ್ನೆಗಳಿಗೆ ಸಮರ್ಪಕ ಪರಿಹಾರ ಕಂಡುಕೊಳ್ಳುವುದಕ್ಕೆ ನೆರವಾಗುತ್ತಿತ್ತು. ನಮ್ಮ ಒಂದು ಉಪನಿಷತ್ತಿನ ಹೆಸರೇ ಪ್ರಶ್ನೋಪನಿಷತ್ ಎಂಬುದಾಗಿದೆ. ಇದರಲ್ಲಿ ಮನುಷ್ಯ ಬುದ್ಧಿಗೆ ಹೊಳೆದ ಅರ್ಥಪೂರ್ಣ ಪ್ರಶ್ನೆಗಳೂ ಸಮಾಧಾನಗಳೂ ನಿಹಿತವಾಗಿವೆ. (**'ದ್ವೇ ವಿದ್ಯೇ ವೇದಿತವ್ಯೇ ಪರಾ ಚ ಅಪರಾ'**)

ಇಂದು ಭಾರತೀಯ ಸನಾತನ ಸಂಸ್ಕೃತಿಗೂ ಮತ್ತು ಶಿಕ್ಷಣಕ್ಕೆ ಇರುವ ಸಹಜವಾದ ಸಂಬಂಧವನ್ನು ಮೇಲೆ ತಿಳಿಸಿದ ಧರ್ಮನಿರಪೇಕ್ಷತೆ ಎಂಬ ಒಂದು ಅಸಮಂಜಸ ಕಲ್ಪನೆಯಿಂದ ನಾವು ಕಳೆದುಕೊಂಡಿದ್ದೇವೆ. ಇದರಿಂದ ನಮ್ಮ ಈಗಿನ ಶಿಕ್ಷಣವು ನಮ್ಮ ಸಂಸ್ಕೃತಿಯ ಆವಶ್ಯಕ ವಿಚಾರಗಳನ್ನು ಆವಶ್ಯಕ ಪ್ರಮಾಣದಲ್ಲಿ ಬಿಂಬಿಸುತ್ತಿಲ್ಲ. ಜನಮಾನಸಕ್ಕೆ ರಾಷ್ಟ್ರೀಯತೆಯ ಬುನಾದಿಯಾದ ಸುವಿಚಾರಗಳನ್ನು ಸರ್ವಜನ ಹಿತವನ್ನು ಬಯಸುವ ಉನ್ನತ ಆಧ್ಯಾತ್ಮಿಕ ಮೌಲ್ಯಗಳ ನೆಲೆಗಟ್ಟಾದ ಸಂಸ್ಕೃತಿಯನ್ನು ಸೂಕ್ತವಾದ ರೂಪದಲ್ಲಿ ನೀಡುತ್ತಿಲ್ಲ. ವಿಶ್ವಮಾನ್ಯ ಸನಾತನ ಸಂಸ್ಕೃತಿ ಮತ್ತು ವಿಜ್ಞಾನ ಎರಡೂ ಸಂಗಮವಾದಾಗ ಅದು ರಾಷ್ಟ್ರೀಯ ಭಾವಧಾರೆಯನ್ನು ಪುಷ್ಟೀಕರಿಸಲು ಹಾಗೂ ನಮ್ಮ ಸಂಸ್ಕೃತಿಯನ್ನು ಸದಾಕಾಲ ರಕ್ಷಿಸಲು ನೆರವಾಗಬಲ್ಲದು. ಇಂತಹ ಶ್ರೀಮಂತವೂ, ಜೀವನಾನುಭವ ಆಧಾರಿತವೂ ಆದ ಹೊಸವಿಚಾರಗಳ ಪರಂಪರೆಯನ್ನು ಸ್ವೀಕರಿಸಲು ಸಮರ್ಥವಾಗಿರುವ ಈ ಸನಾತನ ಸಂಸ್ಕೃತಿಯು ಶಿಕ್ಷಣದ ಮೂಲಕ ವಿದ್ಯಾರ್ಥಿಗಳನ್ನು ಹಾಗೂ ಜನಮಾನಸವನ್ನು ತಲುಪದಿದ್ದರೆ, ಅಥವಾ ನಮ್ಮ ಜೀವನಕ್ರಮದಿಂದ ಹೊರಗಿದ್ದರೆ, ಅದು ಕಳೆಗುಂದಿ ಕ್ರಮೇಣ ನಾಶವಾಗುವುದು. ಶಿಕ್ಷಣವನ್ನು ಧರ್ಮನಿರಪೇಕ್ಷಗೊಳಿಸುವ ಆತುರದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳಿಗೆ ನಾವು ಬಹುದೊಡ್ಡ ಬೆಲೆಯನ್ನು ತೆರಬೇಕಾದೀತು. ನಿಜವಾಗಿಯೂ ಆದರ್ಶಪ್ರಾಯವಾದ ವಿಶ್ವಮಾನ್ಯ ಸನಾತನ ಸಂಸ್ಕೃತಿಯನ್ನು ಆಧುನಿಕ ತಂತ್ರಜ್ಞಾನದೊಂದಿಗೆ ಮೇಳೈಸಿದ ಶಿಕ್ಷಣಕ್ರಮವೊಂದನ್ನು ರೂಪಿಸುವುದೇ ಭಾರತವು ಜಗತ್ತಿಗೆ ಕೊಡಬಹುದಾದ ಅತಿ ದೊಡ್ಡ ಮತ್ತು ಅತಿ ಆವಶ್ಯಕ ಕಾಣಿಕೆಯಾಗಿದೆ. ಈ ವಾಸ್ತವಿಕ ಸತ್ಯವನ್ನು ಈಗ ಸರ್ವರೂ ಮನಗಾಣಬೇಕಾಗಿದೆ.

### ಭಾರತೀಯ ಸಂಸ್ಕೃತಿಯ ವೈಶಾಲ್ಯತೆ ಮತ್ತು ಉದಾರತೆ

ಭಾರತೀಯರು ಸನಾತನ ಧರ್ಮವನ್ನು ಸ್ವಾಭಾವಿಕವಾಗಿಯೇ ಅವಲಂಬಿಸಿದ್ದಾರೆ. ಈ ಸಂಸ್ಕೃತಿಯ ವೈಶಾಲ್ಯ ಹಾಗೂ ಉದಾತ್ತತೆ ಎಷ್ಟೆಂದರೆ ವಿಭಿನ್ನವಾದ ಚಿಂತನಾಧಾರೆಗಳಿಗೆ ಮತ್ತು ಆರಾಧನಾಕ್ರಮಗಳ ವೈವಿಧ್ಯತೆಗೆ ವಿಪುಲವಾದ ಅವ

ಕಾಶವಿಲ್ಲಿದೆ. ಭಾರತೀಯ ತತ್ತ್ವಶಾಸ್ತ್ರದ ಪರಂಪರೆಯಲ್ಲಿ ದೇವರನ್ನು ನಂಬದ ಚಾರ್ವಾಕರಂತಹ ನಾಸ್ತಿಕರೂ ಇರುವುದನ್ನು ಕಾಣುತ್ತೇವೆ. ಈ ದೇಶದಲ್ಲಿ ಧರ್ಮಾಚರಣೆಯ ತತ್ತ್ವಗಳು ಅವರವರ ಮನೋಭಾವಕ್ಕನುಗುಣವಾಗಿ ರೂಪುಗೊಂಡು ಪ್ರತಿಯೊಬ್ಬರೂ ತಮ್ಮ ತಮ್ಮ ನಂಬಿಕೆಯಂತೆ ಜೀವಿಸುವ ಸ್ವಾತಂತ್ರ್ಯವಿದೆ. ವಿಶ್ವದ ಇತಿಹಾಸದಲ್ಲೇ ಬೇರೆ ಯಾವ ಸಂಸ್ಕೃತಿಯೂ ಇಷ್ಟು ಉದಾತ್ತವಾದ ಮತ್ತು ಮನುಷ್ಯನ ಸರ್ವಾಂಗೀಣ ಪ್ರಗತಿಗೆ ಸಾಧ್ಯವಾಗುವ ಎಲ್ಲ ವಿಭಿನ್ನ ಅಂಶಗಳನ್ನೂ ಸಾಮರಸ್ಯದಿಂದ ಒಂದುಗೂಡಿಸುವ ಶಕ್ತಿಯನ್ನೂ ಹೊಂದಿಲ್ಲ. ಈ ಶಕ್ತಿ ಭಾರತೀಯ ಸನಾತನ ಸಂಸ್ಕೃತಿಯನ್ನು ಬೋಧಿಸುವ ಶಿಕ್ಷಣ ಪರಂಪರೆಗೆ ಮಾತ್ರ ಇದೆ.

ನಮ್ಮ ಶಿಕ್ಷಣದ ವ್ಯವಸ್ಥೆ ಹೇಗಿತ್ತು? ಅದು ಹೇಗೆ ಕಾಲಕ್ರಮೇಣ ಬದಲಾವಣೆ ಹೊಂದಿತು? ಅದರ ಯಾವ ಅಂಶಗಳು ಭಾರತದಲ್ಲಿ ಅಜರಾಮರವಾಗಿ ಉಳಿಯಬಲ್ಲವು? ಆ ಬುನಾದಿಯ ಮೇಲೆ ಶೈಕ್ಷಣಿಕ ವ್ಯವಸ್ಥೆ ಹೇಗಿರಬೇಕು? ಎಂಬುದನ್ನು ಪರಿಶೀಲಿಸಿದಾಗ, ಭಾರತೀಯ ಸಾಂಸ್ಕೃತಿಕ ಪರಂಪರೆಯು ಧಾರ್ಮಿಕ ವಿಚಾರ ಮತ್ತು ಸಂವಾದಗಳನ್ನು ವಿಶಾಲ ಮನೋಭಾವದಿಂದ ಸ್ವೀಕರಿಸುತ್ತಾ ಬೆಳೆದು ಬಂದಿರುವುದು ಸ್ಫುಟವಾಗಿ ಗೋಚರವಾಗುತ್ತದೆ. ಇತಿಹಾಸದುದ್ದಕ್ಕೂ ಬದುಕಿ ಬಾಳುವ ಶಕ್ತಿಯನ್ನು, ಬದಲಾಗುವ ಕಾಲಮಾನದ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಶಕ್ತಿಯನ್ನು, ಹೊಸದನ್ನು ಹಳೆಯದರೊಡನೆ ಅಳವಡಿಸಿಕೊಳ್ಳುವ ಚೈತನ್ಯವನ್ನು ಮತ್ತು ಪ್ರಗತಿಯ ಸಾತತ್ಯವನ್ನು ಈ ಪರಂಪರೆ ಹೊಂದಿದೆ. ಇವು ಭಾರತೀಯ ಸಾಂಸ್ಕೃತಿಕ ಪರಂಪರೆಗೇ ವಿಶಿಷ್ಟವಾಗಿರುವ ಕೆಲವು ಲಕ್ಷಣಗಳು. ನಮ್ಮದು ಋಷಿಗಳ ನಾಡು. ಹೆಚ್ಚಿನ ಋಷಿಗಳು ಗೃಹಸ್ಥಾಶ್ರಮದ ಕರ್ತವ್ಯವನ್ನು ನಿರ್ವಹಿಸಿ, ತಪೋಬಲದಿಂದ ಸತ್ಯದರ್ಶನವನ್ನು ಮಾಡಿದ ಪರಿಪೂರ್ಣ ಜೀವನಕ್ರಮದ ಆದರ್ಶವನ್ನು ಸಮಾಜದ ಮುಂದೆ ಇಟ್ಟವರು. ಋಷಿಗಳಿಂದಲೇ ಮಹಾರಾಜರುಗಳು ಧರ್ಮ-ನೀತಿಯುಕ್ತ ಆಡಳಿತಕ್ರಮಗಳನ್ನು ರೂಪಿಸಿಕೊಂಡಿದ್ದುದು. ನಮ್ಮ ಶಿಕ್ಷಣ ಪದ್ಧತಿಯು ಪೀಳಿಗೆಯಿಂದ ಪೀಳಿಗೆಗೆ ಈ ರೀತಿಯ ಧಾರ್ಮಿಕ ವೈಚಾರಿಕ ಪ್ರೇರಣೆಗಳನ್ನು ವರ್ಗಾಯಿಸುತ್ತಿದ್ದವು. ಗುರುಕುಲಗಳು ತಮ್ಮದೇ ಆದ ಶೈಕ್ಷಣಿಕ ವ್ಯವಸ್ಥೆಗಳನ್ನು ಅಳವಡಿಸಿಕೊಂಡಿದ್ದವು. ಈ ಪದ್ಧತಿಯಿಂದ ಪರಂಪರೆಯು ಉಳಿದು ಮುಂದಿನ ಜನಾಂಗಕ್ಕೆ ವರ್ಗಾವಣೆಯಾಗುತ್ತಿತ್ತು.

### ಭಾರತೀಯ ಸಾಂಸ್ಕೃತಿಕ ಮೌಲ್ಯಗಳು ಹಾಗೂ ವಿದ್ಯಾಭ್ಯಾಸದಲ್ಲಿನ ಪಠ್ಯಕ್ರಮ

ಭಾರತೀಯ ಸಂಸ್ಕೃತಿಯು ಈ ರೀತಿ ಮುಂದಿನ ಪೀಳಿಗೆಗೆ ವರ್ಗಾವಣೆಯಾಗಬೇಕಾದರೆ ನಮ್ಮ ವಿದ್ಯಾಭ್ಯಾಸದಲ್ಲಿನ ಪಠ್ಯಕ್ರಮ, ಶಾಲೆಗಳಲ್ಲಿ ಓದುವ ನಮ್ಮ ವಿದ್ಯಾರ್ಥಿಗಳ ನಡವಳಿಕೆಗಳು, ಆಚರಣೆಗಳು ಉದಾತ್ತ ಮೌಲ್ಯಗಳನ್ನೊಳಗೊಂಡು, ಈ ದೇಶದ ಮೂಲ ಸಂಸ್ಕೃತಿಗೆ ಅನುಗುಣವಾಗಿರಬೇಕು. ವಿದ್ಯಾರ್ಥಿಗಳಿಗೆ ಬೋಧಿಸಲ್ಪಡುವ ಪಾಠದ ದೃಷ್ಟಾಂತಗಳು, ಅವರ ಜೀವನಕ್ಕೆ ಅನ್ವಯವಾಗುವ ಘಟನೆಗಳು, ಹೆಸರುಗಳು, ಹಬ್ಬಗಳು, ವ್ರತಗಳ ಹೆಸರುಗಳು, ದೇವತೆಗಳು, ಆಹಾರಪದ್ಧತಿಗಳು, ತಂದೆ ತಾಯಿಯ ಹೆಸರುಗಳು, ಜೀವನದ ಸಮಸ್ಯೆಯ ಸಂದರ್ಭಗಳು, ಆಡುವ ಭಾಷೆಯ ಧಾಟಿ, ಗಾದೆಗಳು, ಕಾಲದ ಲೆಕ್ಕಾಚಾರಗಳು, ಜೀವನದ ನಿಯಮಗಳು, ಚರಿತ್ರೆ ಮತ್ತು ವೇದ ಉಪನಿಷತ್ತುಗಳಿಂದ ಬಂದ ನಮ್ಮ ನಾಗರಿಕತೆಯ ಮೂಲವನ್ನು ಪ್ರತಿಫಲಿಸುವಂತಿರಬೇಕು. ಇದನ್ನು ಔಪಚಾರಿಕ ಹಾಗೂ ಅನೌಪಚಾರಿಕ ಶಿಕ್ಷಣದಿಂದ ಸಾಧಿಸಲಾಗುತ್ತಿತ್ತು.

ನಮ್ಮ ದೇಶದ ಮೂಲಬಲವೆಂದರೆ ಅಧ್ಯಾತ್ಮಬಲ. ಅದುವೇ ನಮ್ಮ ರಾಷ್ಟ್ರದ ಬಲ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಯಾಕೆಂದರೆ ವ್ಯಕ್ತಿತ್ವದ ಸನಾತನ ಆಧಾರವು ನಿತ್ಯವೂ ಅಮರವೂ ಆದ ಆತ್ಮ ಅಥವಾ ಚೈತನ್ಯಪ್ರಜ್ಞೆ. ಈ ವಾಸ್ತವವನ್ನು ನಮ್ಮ ಶಿಕ್ಷಣ ವ್ಯವಸ್ಥೆ ಒಪ್ಪಿಕೊಂಡಷ್ಟೂ ನಮ್ಮ ಶಾಲಾಕಾಲೇಜುಗಳಿಂದ ರಾಷ್ಟ್ರೀಯತೆಯನ್ನು ಮೈಗೂಡಿಸಿಕೊಂಡ ವಿದ್ಯಾರ್ಥಿಗಳು ಯುವಕರು ಹೊರಬರುತ್ತಾರೆ. ನಮ್ಮ ನಡೆ, ನುಡಿ, ಜೀವನಶೈಲಿ, ಹಬ್ಬಗಳ ಆಚರಣೆಗಳು ಎಲ್ಲಕ್ಕಿಂತಲೂ ಮಿಗಿಲಾಗಿ ಪರಿಸರದ ಮೇಲೆ ಗೌರವ ತೋರುತ್ತವೆ. ಪರಿಸರವನ್ನು ಪೂಜಿಸಿ ಕಾಪಾಡಿದ ಧರ್ಮ ನಮ್ಮದು. ಹೀಗಾಗಿ ಅಕ್ಷರ, ಆರೋಗ್ಯ, ಅಧ್ಯಾತ್ಮಗಳು ಪರಸ್ಪರ ಅವಲಂಬಿತವಾದವು. ಈ ನಿಟ್ಟಿನಲ್ಲಿ ಯೋಚಿಸಿದರೆ ನಮ್ಮ ಧರ್ಮ, ಸಂಸ್ಕೃತಿಯನ್ನು ಶಿಕ್ಷಣ ಪದ್ಧತಿಯಿಂದ ಸಂಪೂರ್ಣವಾಗಿ ಬದಲಾವಣೆ ಮಾಡಿ, ಅಧ್ಯಾತ್ಮದಿಂದ ದೂರ ತಂದು, ಧರ್ಮನಿರಪೇಕ್ಷ ಶಿಕ್ಷಣಪದ್ಧತಿಯೊಂದನ್ನು ನಮ್ಮಲ್ಲಿ ರೂಪಿಸುವ ಎಲ್ಲ ಪ್ರಯತ್ನಗಳೂ ನಮ್ಮ ವಿದ್ಯಾರ್ಥಿಗಳನ್ನು ನೈತಿಕವಾಗಿ ಹಾಗೂ ಅಧ್ಯಾತ್ಮಿಕವಾಗಿ ದುರ್ಬಲಗೊಳಿಸಿ ರಾಷ್ಟ್ರದ ಹಿತಕ್ಕೆ ಧಕ್ಕೆಯನ್ನುಂಟುಮಾಡುತ್ತಿವೆ.

ನಮ್ಮ ದೇಶದಲ್ಲಿ ಪ್ರಮುಖವಾದ ನಡೆನುಡಿಗಳ ವಿದ್ಯಾಭ್ಯಾಸ ಮತ್ತು ಚಾರಿತ್ರ್ಯದ ಬೆಳವಣಿಗೆ ನಮ್ಮ ಧರ್ಮದ ತಳಹದಿಯಲ್ಲಿ ನಡೆಯಬೇಕು. ನಮ್ಮ ಶಾಲೆಗಳಲ್ಲಿ ಧರ್ಮ ಮತ್ತು ವಿಶ್ವಮಾನ್ಯ ಅಧ್ಯಾತ್ಮದ ಬಗ್ಗೆ ಬೋಧಿಸುವ ಯಾವುದೇ ರೀತಿಯ ಪ್ರಯತ್ನಗಳೂ ಇಲ್ಲದಿರುವ ಕಾರಣ, ನಮ್ಮ ಮಕ್ಕಳಿಗೆ ಆಧ್ಯಾತ್ಮಿಕ ಶಿಕ್ಷಣವನ್ನು ಮತ್ತು ಧರ್ಮದ ಮೇಲಿನ ಶ್ರದ್ಧೆಯನ್ನು ಮನೆಯಲ್ಲೇ ನೀಡುವ ಪ್ರಯತ್ನಗಳಾಗಬೇಕು. ಇಂತಹ ಮನೆಯಲ್ಲಿನ ಶಿಕ್ಷಣವನ್ನು ನಾವು ಸರಿಯಾಗಿ ಚಿಂತಿಸಿ, ಮಂಥಿಸಿ ಸಶಕ್ತಗೊಳಿಸಿ ಜೀವನಕ್ರಮದಲ್ಲಿ ಅಳವಡಿಸಿಕೊಳ್ಳಬೇಕು. ಉತ್ತಮ ಸಾಂಸ್ಕೃತಿಕ ಆಚಾರಗಳನ್ನು, ನಡವಳಿಕೆಗಳನ್ನು ಮಕ್ಕಳಲ್ಲಿ ರೂಢಿಸಬೇಕು. ನಮ್ಮ ದೇವಸ್ಥಾನಗಳು, ಧಾರ್ಮಿಕಕೇಂದ್ರಗಳು ಪೂಜಾಕ್ರಮಗಳ ಜೊತೆಗೇ ಸಂಸ್ಕೃತಿ ಶಿಕ್ಷಣ ಮತ್ತು ಸೇವಾ ಮನೋಭಾವನೆಯನ್ನು ಬೆಳೆಸುವ ಒಂದು ಹೊಸ ಯೋಜನೆಯನ್ನು

ರೂಪಿಸುವ ಆವಶ್ಯಕತೆ ಇಂದು ತೀವ್ರವಾಗಿ ಇದೆ. ಇಂತಹ ವ್ಯವಸ್ಥೆಯ ಮೂಲಕ ನಮ್ಮ ಸಂಸ್ಕೃತಿಯ ಶಿಕ್ಷಣವನ್ನು ನಮ್ಮ ಮಕ್ಕಳಿಗೆ, ಯುವಕರಿಗೆ ಹಾಗೂ ಜನಸಾಮಾನ್ಯರಿಗೆ ನೀಡು ವಂತಾಗಬೇಕು.

ಆದ್ದರಿಂದ ಈಗ ನಮಗೆ ಬೇಕಾಗಿರುವುದು ನಮ್ಮ ಸಂಸ್ಕೃತಿ ಯಲ್ಲಿರುವ ಸಕಾರಾತ್ಮಕ, ವೈಜ್ಞಾನಿಕ ವ್ಯಕ್ತಿತ್ವವನ್ನು ಬೆಳಗಿಸುವ, ಮನಸ್ಸನ್ನು ಪುಷ್ಟಿಗೊಳಿಸುವ, ಸನ್ಮತಿಯನ್ನು ಕೊಡುವ, ನೂರಾರು ವರ್ಷಗಳ ಜೀವನ ಪದ್ಧತಿಯಲ್ಲಿ ಪರೀಕ್ಷಿಸಲ್ಪಟ್ಟ ಜ್ಞಾನದ ತುಣು ಕುಗಳು. ಅದನ್ನು ವಿದ್ಯಾರ್ಥಿಗಳ ವಯೋಮಾನಕ್ಕೆ ಅನುಗುಣ ವಾಗಿ ಹಂತಹಂತವಾಗಿ ಹೆಣೆದು, ಆಧುನಿಕ ವಿಚಾರಗಳೊಡನೆ ಮೇಳೈಸಿ, ರಾಷ್ಟ್ರೀಯತೆಯನ್ನು ಬೆಳೆಸುವ, ಸರ್ವಜನ ಹಿತವನ್ನು ಸಾಮರಸ್ಯದಿಂದ ಸಾಧಿಸುವ ವಿಚಾರಧಾರೆಯ ಆಧಾರದಲ್ಲಿ ಒಂದು ಸಂಶೋಧನಾತ್ಮಕ ಶಿಕ್ಷಣದ ನಿರೂಪಣೆಯಾಗಬೇಕು. ಆಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಕೌಟುಂಬಿಕ ಕರ್ತವ್ಯಗಳಿಗೆ ಮಾರ್ಗದರ್ಶಿಯಾಗುವ ಒಂದು ಪಠ್ಯಕ್ರಮವನ್ನು ರೂಪಿಸಬೇಕು.

### ಸಾಮಾನ್ಯ ಶಿಕ್ಷಣ ಪದ್ಧತಿ ಮತ್ತು ಪೂರಕ (Complimentary) ಶಿಕ್ಷಣ ಪದ್ಧತಿ

ಸಾವಿರಾರು ವರ್ಷಗಳ ಚಿಂತನ-ಮಂಥನದ ಜೀವನದ ಅನುಭವದ ಆಧಾರದ ಮೇಲೆ ರಚಿಸಲ್ಪಟ್ಟ, ಲೋಕಕಲ್ಯಾಣ ವನ್ನು ಬಯಸುವ ಭಾರತೀಯ ಸಂಸ್ಕೃತಿಯು ವಿಶಿಷ್ಟವಾದುದು. ಇದು ಮನುಷ್ಯನ ಸಹಜ ಪ್ರಕೃತಿಯನ್ನು ಆಧರಿಸಿ, ಮನು ಕುಲದ ಪ್ರಗತಿಯನ್ನು ಮತ್ತು ಸರ್ವಜನ ಹಿತವನ್ನು ಸಾಧಿಸಬಲ್ಲ ಯಶಸ್ವಿಯಾಗಿ ಬೆಳೆದು ನಿಂತ ಜ್ಞಾನರಾಶಿ. ಕಾಲ-ಕಾಲಕ್ಕೆ ಸಹಜ ವಾಗಿ ಹಂತ-ಹಂತವಾಗಿ ಬೆಳೆದು ಬಂದ, ಇತರ ಧರ್ಮ-ವಿಜ್ಞಾನ, ಮನಃಶಾಸ್ತ್ರ, ಶಾಂತಿ, ತಾಳ್ಮೆ, ಪ್ರೀತಿ, ಎಲ್ಲರನ್ನೂ ಒಗ್ಗೂ ಡಿಸುವ ಸಹಜೀವನದ ಈ ವಿಶ್ವಮಾನ್ಯ ತತ್ತ್ವ ಈಗ ಜಗತ್ತಿಗೆ ಬೇಕಾಗಿದೆ. ಇದು ಯೋಗ, ಆಯುರ್ವೇದ, ಆಧ್ಯಾತ್ಮ, ಧ್ಯಾನ, ವೇದಾಂತ ತತ್ತ್ವಗಳನ್ನೊಳಗೊಂಡ ಹಾಗೂ ಮತೀಯತೆಯನ್ನು ಅತಿಕ್ರಮಿಸಿ ಬೆಳೆದುನಿಂತಿದೆ; ಪ್ರತಿಯೊಂದು ಜನಾಂಗದ ಸಹಜ ಜೀವನ ಪದ್ಧತಿ ಮತ್ತು ಆವಶ್ಯಕ ನಂಬಿಕೆಗಳನ್ನು ಸ್ವೀಕರಿಸಿ, ಅವು ಗಳನ್ನು ಮತ್ತಷ್ಟು ಶುದ್ಧೀಕರಿಸಿ, ಮನುಕುಲದ ಪ್ರಗತಿಗೆ ವರ ದಾಯಕವಾದ ವೈಜ್ಞಾನಿಕ ಸತ್ಯದ ಜ್ಞಾನರಾಶಿ ಈ ಸನಾತನ ಸಂಸ್ಕೃತಿಯಲ್ಲಿ ಹುದುಗಿದೆ. ಈ ಸತ್ಯವನ್ನು ಪ್ರಪಂಚದಾದ್ಯಂತ ಇರುವ ಪ್ರಗತಿಪರ ಚಿಂತಕರು ಕಂಡುಕೊಂಡಿದ್ದಾರೆ. ಆದರೆ ಈಗ ನಮ್ಮ ವರ್ತಮಾನ ಸಮಾಜ, ರಾಜಕೀಯ ಆಡಳಿತಾತ್ಮಕ ವ್ಯವಸ್ಥೆ ಇದನ್ನು ಕಂಡುಕೊಳ್ಳಬೇಕು.

ನಮ್ಮ ಶಿಕ್ಷಣದಲ್ಲಿ ನಮ್ಮ ಸಂಸ್ಕೃತಿಯ ಈ ಅಮೂಲ್ಯ ಅಂಶ ಗಳನ್ನು ನಾವು ಅಳವಡಿಸಿ, ಈಗಿನ ಮತ್ತು ಮುಂದಿನ ಮಕ್ಕಳಿಗೆ ಮತ್ತು ಯುವಕರಿಗೆ ಅದನ್ನು ತಿಳಿದುಕೊಳ್ಳುವ ಅವಕಾಶವನ್ನು ಮಾಡಿಕೊಡಲೇಬೇಕು. ಈ ನಮ್ಮ ವಿಶಿಷ್ಟ ಸಂಸ್ಕೃತಿ ಜ್ಞಾನ ಕೊಡುವ ಒಂದು ಪೂರಕ (Complimentary) ಶಿಕ್ಷಣ ಪದ್ಧತಿ ಯನ್ನು ಅಳವಡಿಸುವುದರ ಮೂಲಕ ನಮ್ಮ ಸಾಮಾನ್ಯ ಶಿಕ್ಷಣ ಪದ್ಧತಿಯನ್ನು ದೃಢೀಕರಿಸಿ, ನಿಜವಾದ ಸಾಮರಸ್ಯದ ಪ್ರಗತಿಯ ಸೂತ್ರವನ್ನು ಯಶಸ್ವಿಯಾಗಿ ಪ್ರಸ್ತುತ ಪಡಿಸಿ, ಜಗತ್ತಿನ ಗಮನ ವನ್ನು ಸೆಳೆಯುವ ಕಾಲ ಈಗ ಒದಗಿ ಬಂದಿದೆ. ವಿಶ್ವದ ವಿವಿಧ ಜನಾಂಗವೆಲ್ಲ ಇಂತಹ ಸಮಗ್ರ ಅರ್ಥ ಪೂರ್ಣ ಜ್ಞಾನರಾಶಿಗಾಗಿ ಹಾತೊರೆಯುತ್ತಿದೆ.

### ನಾವು ಈ ಸಂಕ್ರಮಣ ಕಾಲಘಟ್ಟದಲ್ಲಿ ತಿಳಿಯಬೇಕಾದ್ದೇನು, ಮಾಡಬೇಕಾದ್ದೇನು?

ನಮ್ಮ ಸನಾತನ-ವೈಜ್ಞಾನಿಕ-ಪ್ರಗತಿಪರ, ಬುದ್ಧಿಯನ್ನು ಪರಿ ಷ್ಕರಿಸಿ ಬೆಳಗಿಸುವ ಮತ್ತು ವಿಕಸಿತಗೊಳಿಸುವ ಅಂತೆಯೇ ಆತ್ಮ ನಿರ್ಭರತೆ, ಧೈರ್ಯ, ಪ್ರೀತಿ, ಶಾಂತಿ, ಸಂತೋಷವನ್ನು ಕೊಡುವ ಜ್ಞಾನರಾಶಿ ಹಾಗೂ ಜೀವನ ಪದ್ಧತಿ ಜಗತ್ತಿಗೆ ಇಂದು ಬೇಕಾಗಿದೆ.

ಭೌತಿಕವಾದದ ವಿಕೃತ ಒತ್ತಡದಿಂದ ಮಾನವನ ಮನಸ್ಸು ಕುಸಿಯುತ್ತಿದೆ. ನಿರಾಶೆ, ಮಾನಸಿಕ ಒತ್ತಡ ಖಿನ್ನತೆಗಳಂತಹ (depression) ವಿವಿಧ ರೀತಿಯ ಮನೋರೋಗಗಳು ವ್ಯಾಪಕ ವಾಗಿ ಜೀವನದ ಅರ್ಥಹೀನತೆಯ ಭಾವವು ಹೆಚ್ಚಾಗಿ ಮನುಷ್ಯ ಜೀವನವನ್ನು ದಿಗ್ಭ್ರಾಂತಗೊಳಿಸಿವೆ. ಕೊಳ್ಳುಬಾಕ ಸಂಸ್ಕೃತಿ ಮತ್ತು ಆರ್ಥಿಕ ನೀತಿಗಳ ಒತ್ತಡದಿಂದ ನಿಜಜೀವನದ ಶಾಂತಿ-ಸೌಖ್ಯ ಮತ್ತು ಸತ್ಯಶೋಧನೆಯ ಮಾರ್ಗದಿಂದ ದೂರಸರಿಯುತ್ತಿದೆ. ಹತಾಶರಾಗಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ದಿನೇ-ದಿನೇ ಹೆಚ್ಚುತ್ತಿದೆ. ಪ್ರಕೃತಿ ಅಥವಾ ದೈವಶಕ್ತಿ ಮನುಷ್ಯನನ್ನು ಪ್ರಪಂಚ ದಲ್ಲಿ ಯಾಕೆ ಸೃಷ್ಟಿಸಿದೆ ಎಂಬ ಪ್ರಶ್ನೆಯು ಮನುಕುಲವನ್ನು ಕಾಡುತ್ತಿದೆ. ಜೀವನದ ಉದ್ದೇಶವನ್ನು ಅರ್ಥಮಾಡಿಕೊಳ್ಳಬೇ ಕೆಂಬ ಅಭೀಪ್ಸೆಯು ವ್ಯಾಪಕವಾಗುತ್ತಿದೆ. ಸಾವು-ನೋವುಗಳ ಜೀವನವನ್ನು ಹೇಗೆ ಸಮರ್ಥವಾಗಿ ಎದುರಿಸಬಹುದು ಎಂಬು ದರ ಬಗ್ಗೆ ವಿಶೇಷವಾದ, ಆಳವಾದ, ವೈಜ್ಞಾನಿಕವಾದ, ಪ್ರಾಯೋ ಗಿಕವಾದ ವಿಚಾರವನ್ನು ಭಾರತೀಯ ಆಧ್ಯಾತ್ಮಿಕ ಜ್ಞಾನವು ಹೊಂದಿದೆ. ಇದು ಇಡೀ ವಿಶ್ವಕ್ಕೇ ಸೇರಿದುದು ಎಂಬ ಜ್ಞಾನೋ ದಯ ಈಗಲಾದರೂ ನಮಗಾಗಬೇಕು. ವಿಶ್ವದ ಪ್ರಗತಿಪರ ಚಿಂತಕರು ಇದನ್ನು ಕಂಡುಕೊಳ್ಳುತ್ತಿದ್ದಾರೆ. ಪಾಶ್ಚಾತ್ಯ ಚಿಂತ ನೆಯೇ ಸಾರ್ವಭೌಮ; ಅದೇ ಆ ಚಿಂತನೆ ಭಾರತೀಯದ್ದಾದರೆ ತಿರಸ್ಕಾರಯೋಗ್ಯ ಎಂಬ ಅವಿವೇಕದಿಂದ, ಕೀಳರಿಮೆಯಿಂದ ನಾವು ಅನೇಕ ದಶಕಗಳಿಂದ ಬಳಲುತ್ತಿದ್ದೇವೆ. ಇಂತಹ ಮನೋ ಭಾವವನ್ನು ಸ್ವಾಮಿ ವಿವೇಕಾನಂದರು, ಶ್ರೀ ಅರವಿಂದರು ತೀವ್ರ ವಾಗಿ ಖಂಡಿಸಿದ್ದಾರೆ.

ಪ್ರಗತಿಪರ ವಿಚಾರ ವಿಶ್ವದೆಲ್ಲೆಡೆ ವ್ಯಾಪಿಸಿದೆ. ಅದು ಇರು ವುದು ಕೇವಲ ಪಾಶ್ಚಿಮಾತ್ಯ ಭೂಭಾಗದಲ್ಲಿ ಮಾತ್ರವಲ್ಲ. ಪಾಶ್ಚಿ